ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 53 ಜನವರಿ 9, 1983 ಬೆಲೆ 60 ಪೈಸೆ

ಕರ್ನಾಟಕ - ಆಂಧ್ರ ಪ್ರದೇಶಗಳಲ್ಲಿ ಕಾಂಗ್ರೆಸ್ (ಐ) ನ ಪರಾಭವ

ತ್ರಿಪುರಾದಲ್ಲಿ ಎಡರಂಗದ ಭಾರೀ ವಿಜಯ

ಜನವರಿ 5, 1983 ರಂದು ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತ್ರಿಪುರಾ—ಈ ಮೂರು ರಾಜ್ಯಗಳಲ್ಲಿ ನಡೆದ ಚುನಾವಣೆಯ ಫಲಿತಾಂಶದಿಂದ ದೇಶದ ರಾಜಕೀಯ ಅಧ್ಯಾಯದಲ್ಲೇ ಹೊಸ ತಿರುವು ಉಂಟಾಗಿದೆ. ಕಾಂಗ್ರೆಸ್ (ಐ)ನ ಭದ್ರಕೋಟೆಗಳೆಂದು ಪರಿಗಣಿತವಾಗಿದ್ದ ಆಂಧ್ರ ಪ್ರದೇಶ್ ಮತ್ತು ಕರ್ನಾಟಕಗಳಲ್ಲಿ ಕಾಂಗ್ರೆಸ್ (ಐ) ಭಾರೀ ಪರಾಭವ ಹೊಂದಿದೆ. ಅನ್ಯಾಯ, ಅಕ್ರಮ, ಗೋಳಿಬಾರಿನಿಂದ ನೊಂದ ಜನತೆ ಸರ್ವಾಧಿಕಾರೀ ಶಕ್ತಿಗಳನ್ನು ಹಿಮ್ಮೆಟ್ಟಿಸಿದೆ.

ಇಂದಿರಾ ನಾಮಬಲದಿಂದ, ಪಕ್ಷಾಂತರಿಗಳ ನೆರವಿನಿಂದ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದ ಗುಂಡೂರಾವ್‌ರನ್ನು ಸೋಮವಾರ ಪೇಟೆಯ ಮತದಾರರು ಮಣ್ಣು ಮುಕ್ಕಿಸಿದ್ದಾರೆ. ರಾವ್ ಸಂಪುಟದ ಹೆಚ್ಚಿನಂಶ ಮಂತ್ರಿಗಳೂ ಪರಾಭವ ಗೊಂಡಿದ್ದಾರೆ. ಆಂಧ್ರದಲ್ಲಂತೂ ಕಾಂಗ್ರೆಸ್ (ಐ) ಧೂಳೀಪಟವಾಗಿದೆ. ತ್ರಿಪುರಾದಲ್ಲಿ ಎಡರಂಗದ ವಿಜಯದ ಬಗ್ಗೆ ಯಾರಿಗೂ ಸಂಶಯವೇ ಇರಲಿಲ್ಲ.

ಈ ಚುನಾವಣಾ ಫಲಿತಾಂಶ ನಿಸ್ಸಂಶಯವಾಗಿ ಮಹತ್ವದ ತಿರುವು, ಪೊಳ್ಳು ಘೋಷಣೆಗಳನ್ನು ಮುಂದಿಟ್ಟು ಜನತೆಯನ್ನು ಮೋಸ ಮಾಡುತ್ತ ಬಂದ ಕಾಂಗ್ರೆಸ್ (ಐ)ಯನ್ನು ಧೂಳೀಪಟ ಮಾಡುವ ಮೂಲಕ ಜನತೆ ತನ್ನ ಆಕ್ರೋಶ ವ್ಯಕ್ತಪಡಿಸಿದೆ.

ಕರ್ನಾಟಕ ರಾಜ್ಯದ ಜನತೆ ತನ್ನಲ್ಲಿ ವ್ಯಕ್ತಪಡಿಸಿದ ಅಗಾಧ ವಿಶ್ವಾಸವನ್ನು ಸಾರ್ಥಕಪಡಿಸುವ ರೀತಿಯಲ್ಲಿ ವಿರೋಧ ಪಕ್ಷಗಳು ಮುಂದುವರಿಯುವವೆಂಬ ಆಶಯ ನಮ್ಮದು.

ಕರ್ನಾಟಕದ ರಾಜಕೀಯದಲ್ಲಿ ಗಮನಾರ್ಹ ಬದಲಾವಣೆ

—ಕಾಂ| ವಿ. ಜೆ. ಕೆ. ನಾಯರ್

5-1-1983 ರಂದು ಕರ್ನಾಟಕ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಬೆಂಬಲ ಪಡೆದ ಮೂವರು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಚುನಾಯಿತಗೊಂಡು ವಿಧಾನ ಸಭೆಗೆ ಪ್ರವೇಶಿಸಿದ್ದಾರೆ. ಇದರಿಂದಾಗಿ ವಿಧಾನ ಸಭೆಯಲ್ಲಿ ಎಡ ಪಕ್ಷಗಳ ಸಂಖ್ಯೆ ವೃದ್ಧಿಯಾಗಿರುವುದರ ಜೊತೆಗೆ ಕರ್ನಾಟಕದ ಎಡ ಮತ್ತು ಪ್ರಜಾಸತ್ತಾತ್ಮಕ ಹೋರಾಟಗಳಿಗೆ ವಿಧಾನ ಸಭೆಯ ಒಳಗೆ ಮತ್ತು ಹೊರಗೆ ಹೆಚ್ಚಿನ ಬೆಂಬಲ ಸಿಗುವುದು ಸಾಧ್ಯವಾಗುತ್ತದೆ.

ಇದೇ ಸಂದರ್ಭದಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲು ಅನುಭವಿಸಲು ಕಾರಣವಾದ ಅಂಶಗಳನ್ನೂ ಸಹ ನಾವು ವಿಶ್ಲೇಷಿಸಬೇಕಾಗುತ್ತದೆ.

ತಮ್ಮ ಮೇಲೆ ಹೇರಲ್ಪಟ್ಟಿದ್ದ ದಬ್ಬಾಳಿಕೆಯ ಹೊರೆಯನ್ನು ನಿವಾರಿಸಿಕೊಳ್ಳುವ ಮೊದಲನೆಯ ಪ್ರಯತ್ನದಲ್ಲಿ ಜನತೆಯು ಕಾಂಗ್ರೆಸ್ ಸರ್ಕಾರವನ್ನು ಉರುಳಿಸಿದ್ದಾರೆ.

ಕಳೆದ 33 ತಿಂಗಳ ಗುಂಡೂರಾಯರ ಆಡಳಿತ ಕಾಲದಲ್ಲಿ ಜನತೆಯ ಸಮಸ್ಯೆಗಳು ಹೆಚ್ಚಿತು. ಬೆಲೆಯೇರಿಕೆಯಿಂದ ನರಳುತ್ತಿದ್ದ ಕಾರ್ಮಿಕ ವರ್ಗ ತಮ್ಮ ಜೀವನ ಮಟ್ಟವನ್ನು ಉಳಿಸಿಕೊಳ್ಳಲು ವ್ಯಾಪಕವಾದ ಹೋರಾಟಗಳನ್ನು ನಡೆಸಿತು. ಇದನ್ನು ಹತ್ತಿಕ್ಕಲು ಕಾಂಗ್ರೆಸ್ ಆಡಳಿತವು ನಡೆಸಿದ ಪ್ರಯತ್ನ, ಪೋಲೀಸರ ಸೇವೆ ನಡೆಸುವ ಎಫ್. ಎಂ. ಖಾನ್, ಹಂಪ್ರಸಾದ್ ಮುಂತಾದವರ ಗೂಂಡಾಗಿರಿ, ಪೋಲೀಸ್ ಕಮೀಷನರ್ ನಿಜಾಮುದ್ದೀನ್‌ರವರ ಕಾರ್ಮಿಕ ವಿರೋಧೀ ಧೋರಣೆ ಇವುಗಳೆಲ್ಲಾ ಗುಂಡೂರಾವ್ ಸರ್ಕಾರದ ನಿಜ ಸ್ವರೂಪವನ್ನು ಜನತೆಗೆ ತೋರಿದವು.

(8ನೇ ಪುಟ ನೋಡಿ)

ಸಂಪಾದಕೀಯ

ಕಾಂಗ್ರೆಸ್ ಕೋಟೆ ಧ್ವಂಸ

ಕಾಂಗ್ರೆಸ್‌ನ ಭದ್ರ ಕೋಟೆಯಾಗಿದ್ದ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ಕಾಂಗ್ರೆಸ್ ಪಕ್ಷವು ಭಯಂಕರ ಸೋಲನ್ನು ಅನುಭವಿಸಿದೆ ಸ್ವಾತಂತ್ರ್ಯ ಗಳಿಸಿದ ನಂತರ ಇಲ್ಲಿಯವರೆಗೂ ಈ ರಾಜ್ಯಗಳು ಕಾಂಗ್ರೆಸ್ ಆಳ್ವಿಕೆಯಲ್ಲೇ ಬಂದಿದ್ದು ಕಾಂಗ್ರೆಸ್‌ನ ಅತ್ಯಂತ ಬಲಿಷ್ಠ ಕೇಂದ್ರಗಳಾಗಿದ್ದವು. ಆದರೆ ಮೊನ್ನೆ ನಡೆದ ಚುನಾವಣೆಯಲ್ಲಿ ಜನತೆ ಕಾಂಗ್ರೆಸ್‌ಗೆ ವಿರುದ್ಧವಾಗಿ ತೀರ್ಪು ನೀಡಿದ್ದಾರೆ. ಇದು ಈ ರಾಜ್ಯಗಳಲ್ಲಿ ನಡೆದಿರುವ ಒಂದು ಮಹತ್ವದ ರಾಜಕೀಯ ಬದಲಾವಣೆಯಾಗಿದೆ.

ಕಳೆದ ಮೂರೂವರೆ ದಶಕಗಳಿಂದ ಜನವಿರೋಧೀ ಧೋರಣೆಗಳನ್ನು ಅನುಸರಿಸಿಕೊಂಡು ಬಂದ ಕಾಂಗ್ರೆಸ್ ಆಡಳಿತದಿಂದ ಬೇಸತ್ತ ಜನತೆ ಅಧಿಕಾರಶಾಹೀ ನಿರಂಕುಶ ಆಡಳಿತವನ್ನು ಕರ್ನಾಟಕ ಮತ್ತು ಆಂಧ್ರಗಳಲ್ಲಿ ಅಂಶಿಮವಾಗಿ ಕಿತ್ತೊಗೆದಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಅಖಿಲ ಭಾರತ ಮಟ್ಟದಲ್ಲಿ ದುರ್ಬಲಗೊಳಿಸಿದ್ದಾರೆ.

ಚುನಾವಣೆ ನಡೆದ ಮತ್ತೊಂದು ರಾಜ್ಯವಾದ ತ್ರಿಪುರಾದಲ್ಲಿ ಕಾಂಗ್ರೆಸ್ ಪಕ್ಷವು 1977 ರಲ್ಲೇ ಸೋತು ಸಿ. ಪಿ. ಐ. (ಎಂ) ನೇತೃತ್ವದ ಎಡರಂಗ ಸರ್ಕಾರ ಅಧಿಕಾರ ವಹಿಸಿಕೊಂಡಿತ್ತು. ಈಗ ಎರಡನೇ ಅವಧಿಗೆ ಎಡರಂಗ ಸರ್ಕಾರವನ್ನು ಜನತೆ ಮತ್ತೊಮ್ಮೆ ಚುನಾಯಿಸಿದೆ. ಇದು ಎಡರಂಗದ ಜನಪರ ನಿಲುವಿಗೆ ಸಾಕ್ಷಿಯಾಗಿದೆ.

ಈ ಸಲದ ಚುನಾವಣಾ ಫಲಿತಾಂಶ ದೇಶದ ರಾಜಕೀಯದ ಮೇಲೆ ಒಂದು ಮಹತ್ವದ ಪರಿಣಾಮ ಉಂಟುಮಾಡಲಿದೆ. ಶ್ರೀಮತಿ ಗಾಂಧಿಯವರ ಅನುವಂಶಿಕ ಆಡಳಿತದ ನಿರಂಕುಶತ್ವಕ್ಕೆ ಜನತೆ ಸ್ಪಷ್ಟವಾದ ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಅಸಾಧಾರಣವಾದುದಾಗಲೀ ಆಶ್ಚರ್ಯಕರವಾದುದಾಗಲೀ ಏನೂ ಇಲ್ಲ. ಇದು ಜನತೆಯು ಕೈಗೊಂಡ ಧಿಢೀರ್ ತೀರ್ಮಾನವೂ ಅಲ್ಲ. ಬದಲಾಗಿ ಇದು ಅನಿವಾರ್ಯವಾಗಿ ಆಗಲೇಬೇಕಾದ ರಾಜಕೀಯ ಪ್ರಕ್ರಿಯೆಯ ಪರಿಣಾಮವೇ ಆಗಿದೆ.

ಈ ಸಲದ ಚುನಾವಣೆ ಸಾಧಿಸಿರುವುದು ಪ್ರಜಾಪ್ರಭುತ್ವ ಚಳುವಳಿಯ ಒಂದು ಹಂತ ಮಾತ್ರ. ಜನತೆಯ ಪ್ರಜಾಪ್ರಭುತ್ವ ಹೋರಾಟಗಳು ಇನ್ನೂ ಅನೇಕ ಹಂತಗಳನ್ನು ದಾಟಬೇಕಾಗಿದೆ. ಇದರ ಅರ್ಥ ಜನತೆಯ ಹೋರಾಟ ಮುಂದಿನ ದಿನಗಳಲ್ಲಿ ಇನ್ನೂ ತೀವ್ರವಾಗಬೇಕಾಗುತ್ತದೆ. ಜನತೆಯ ಜವಾಬ್ದಾರಿ ಇನ್ನೂ ಹೆಚ್ಚಾಗಬೇಕಾಗುತ್ತದೆ. ಪ್ರಜಾಪ್ರಭುತ್ವ ಚಳುವಳಿಯ ಅಭಾವವಿರುವ ಕರ್ನಾಟಕದಲ್ಲಿ ಆಗಬೇಕಾಗಿರುವ ಕೆಲಸಗಳು ಬೇಕಾದಷ್ಟಿವೆ.

ಈ ಸಲದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಸೋತು ವಿರೋಧ ಪಕ್ಷಗಳು ಅಧಿಕಾರಕ್ಕೆ ಬಂದಿದ್ದರೂ ಕೂಡ ಪರಿಸ್ಥಿತಿಯಲ್ಲಿ ಮೂಲಭೂತ ಮಾರ್ಪಾಡುಗಳೇನೂ ಸಂಭವಿಸಲಾರದು. ಏಕೆಂದರೆ ಕರ್ನಾಟಕ ಮತ್ತು ಆಂಧ್ರಗಳಲ್ಲಿ ಅಧಿಕಾರಕ್ಕೆ ಬಂದಿರುವ ಪಕ್ಷಗಳು ಬಂಡವಾಳಶಾಹೀ ಪರವಾದ ವಿರೋಧ ಪಕ್ಷಗಳೇ ಆಗಿವೆ. ಇಂತಹ ಸರ್ಕಾರಗಳಿಂದ ನಾವು ಹೆಚ್ಚಿನದನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ. ಆದರೆ ಈ ಸರ್ಕಾರಗಳು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತಾತ್ಕಾಲಿಕವಾಗಿಯಾದರೂ ರಕ್ಷಿಸುತ್ತದೆ. ಇನ್ನಿತರ ಕೆಲವು ರಿಯಾಯಿತಿಗಳೂ ದೊರೆಯಬಹುದು.

ಆದರೆ ಒಟ್ಟಾರೆಯಾಗಿ ಹೇಳುವುದಾದರೆ ಈ ಚುನಾವಣೆ ಸರ್ವಾಧಿಕಾರೀ ಆಡಳಿತವನ್ನು ಕಿತ್ತೊಗೆದಿದೆ. ಎಡ ಪಕ್ಷಗಳ ಶಕ್ತಿಯನ್ನು ಹೆಚ್ಚಿಸಿದೆ. ಜನತೆಯನ್ನು ಸಾಕಷ್ಟು ಜಾಗೃತಗೊಳಿಸಿದೆ.

ಕರ್ನಾಟಕದಲ್ಲಿ ಅಧಿಕಾರ ವಹಿಸಿಕೊಂಡಿರುವ ವಿರೋಧ ಪಕ್ಷಗಳು ಸ್ಪಷ್ಟ ಬಹುಮತ ಗಳಿಸಿಕೊಂಡಿಲ್ಲವಾದ್ದರಿಂದ ಅಧಿಕಾರಕ್ಕಾಗಿ ನಡೆಯುವ ಕಿತ್ತಾಟಗಳಾಗಲೀ ಅಥವ ಪಕ್ಷಾಂತರಗಳಾಗಲೀ ಕಾಂಗೈಗೆ ಸಹಾಯ ಮಾಡುತ್ತದೆ ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು. ಹೀಗಾಗಬಾರದೆಂದು ನಾವು ಆಶಿಸುತ್ತೇವೆ.

ಕರ್ನಾಟಕ ಮತ್ತು ಆಂಧ್ರಗಳಲ್ಲಿ ವಿರೋಧ ಪಕ್ಷಗಳನ್ನು ಅಧಿಕಾರಕ್ಕೆ ತಂದು ರಾಜಕೀಯವನ್ನು ಬದಲಿಸಿದ ಮತದಾರರನ್ನೂ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರ್ಕಾರವನ್ನು ಮತ್ತೊಂದು ಅವಧಿಗೆ ಅಧಿಕಾರಕ್ಕೆ ತಂದಿರುವ ತ್ರಿಪುರಾದ ಜನತೆಯನ್ನೂ ನಾವು ಹಾರ್ದಿಕವಾಗಿ ಅಭಿನಂದಿಸುತ್ತೇವೆ.

ಚುನಾವಣೆ — ಕಾಂ। ಇ. ಎಂ. ಎಸ್. ವಿಶ್ಲೇಷಣೆ

ತ್ರಿಪುರಾ, ಆಂಧ್ರ ಪ್ರದೇಶ ಹಾಗೂ ಕರ್ನಾಟಕದಲ್ಲಿ ಕಳೆದ ಹದಿನೈದು ದಿನಗಳಲ್ಲಿ ನಾನು ಕಂಡ ಸಂಗತಿಗಳ ಪ್ರಕಾರ ಹೇಳುವುದಾದರೆ ದೇಶದಾದ್ಯಂತ ಒಂದು ಹೊಸ ಜನಜಾಗೃತಿ ಕಂಡು ಬರುತ್ತಿದೆ. ಈ ಮೂರು ರಾಜ್ಯಗಳಲ್ಲಿ ಮಾತ್ರವಲ್ಲ, ಅವಕಾಶ ಸಿಕ್ಕರೆ ದೇಶಾದ್ಯಂತ ಕಾಂಗ್ರೆಸ್ (ಐ)ನ್ನು ಸೋಲಿಸುವ ಭರವಸೆಯೊಂದಿಗೆ ನಾವು ಮುನ್ನಡೆಯಬಹುದು.

ಬೂರ್ಜ್ವಾ-ಭೂಮಾಲಿಕ ವರ್ಗಗಳು ಹಾಗೂ ಅವುಗಳನ್ನು ಪ್ರತಿನಿಧಿಸುವ ಪಕ್ಷಗಳು ಒಡ್ಡುತ್ತಿರುವ ಆತಂಕಗಳ ಬಗ್ಗೆ ನಾನು ಕುರುಡಾಗಿಲ್ಲ. ತಮ್ಮ ರಾಜಕೀಯ ವಿರೋಧಿಗಳ ಬಗ್ಗೆ ಸುಳ್ಳು ಹೇಳುವುದು, ತಮ್ಮ ಬಗ್ಗೆ ಸುಳ್ಳೇ ಹೇಳಿಕೊಳ್ಳುವುದು, ಒತ್ತಡಕ್ಕೆ ಬಾಗುವರೆಂದು ಕಂಡು ಬರುವ ಮತದಾರರ ಮೇಲೆ ಎಲ್ಲಾ ರೀತಿಯ ಒತ್ತಡ ಹೇರುವುದು ಇವನ್ನೆಲ್ಲಾ ಪ್ರಧಾನ ಮಂತ್ರಿಯವರು ಹಾಗೂ ಅವರ ಸಹೋದ್ಯೋಗಿಗಳು ಒಂದು ಲಲಿತಕಲೆಯಾಗಿ ಬೆಳೆಸಿಕೊಂಡಿದ್ದಾರೆ. ನಮ್ಮ ರಾಜಕೀಯ ವಿರೋಧಿಗಳ ಈ ಎಲ್ಲಾ ಕುಟಿಲೋಪಾಯಗಳನ್ನು ಎದುರಿಸಿದರೆ ಮಾತ್ರ ಕಾಂಗ್ರೆಸ್ (ಐ) ಆಳ್ವಿಕೆಯ ವಿರುದ್ಧ ಹೆಚ್ಚುತ್ತಿರುವ ಅಸಂತುಷ್ಟಿಯನ್ನು ವೋಟುಗಳಾಗಿ ಹಾಗೂ ಸೀಟುಗಳಾಗಿ ಪರಿವರ್ತಿಸಿಕೊಳ್ಳಲು ಸಾಧ್ಯ.

ಈ ಸಂದರ್ಭದಲ್ಲಿ ಆಡಳಿತ ಯಂತ್ರದ ದುರುಪಯೋಗದ ಎರಡು ಉದಾಹರಣೆಗಳನ್ನು ಹೇಳಬಹುದು. ನಾನು ಹಾಗೂ ವಿರೋಧ ಪಕ್ಷಗಳಲ್ಲಿನ ಇತರ ಗೆಳೆಯರು ಈ ಬಗ್ಗೆ ಈಗಾಗಲೇ ಗಮನ ಸೆಳೆದಿದ್ದೇವೆ. ಮೊದಲನೆಯದು ಪೂರ್ವ ಕ್ಷೇತ್ರದ ಸೇನಾ ಮುಖ್ಯಸ್ಥರ ಸಾರ್ವಜನಿಕ ಹೇಳಿಕೆಗಳು ಹಾಗೂ ಎರಡನೆಯದು ಕರ್ನಾಟಕದ ಪ್ರಮುಖ ಪೋಲೀಸ್ ಅಧಿಕಾರಿಯನ್ನು ಕುರಿತಾದದ್ದು.

ಈ ಮೊದಲಿನವರ ಬಗ್ಗೆ ಈಗಾಗಲೇ ಸೇನಾ ವಕ್ತಾರರು 'ನಿರಾಕರಣೆ' ಪ್ರಕಟಿಸಿದ್ದಾರೆ ಈ ಸೇನಾಧಿಕಾರಿ ತಾನು ಪತ್ರಕರ್ತರನ್ನು ಭೇಟಿಯಾಗಿದ್ದುದಾಗಿ, ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಕಾಂಗ್ರೆಸ್-ಟಿ.ಯು.ಜೆ.ಎಸ್. ಮಿತ್ರತ್ವದ ಬಗ್ಗೆ ಹೇಳಿದುದಾಗಿ ಒಪ್ಪಿಕೊಂಡಿದ್ದಾರೆ. ಈ ಸೇನಾಧಿಕಾರಿಯ ವಿರುದ್ಧ ವಿಚಾರಣೆ ನಡೆಸಿ, ಈ 'ಅನೌಪಚಾರಿಕ ಮಾತುಕತೆ'ಯಲ್ಲಿ ಹಾಜರಿದ್ದ ಪತ್ರಕರ್ತರಿಗೆ ಈ ವಿಷಯದಲ್ಲಿ ಅವರ ಹೇಳಿಕೆಯನ್ನು ನೀಡುವ ಹಕ್ಕು ನೀಡುವಂತೆ ನೋಡಿಕೊಳ್ಳುವುದು ಈಗ ಕೇಂದ್ರ ಸರಕಾರ ನಿರ್ವಹಿಸಬೇಕಾದ ಕೆಲಸ.

ಕರ್ನಾಟಕದಲ್ಲಿ ಚುನಾವಣೆಯಲ್ಲಿ ಮಧ್ಯಪ್ರವೇಶಿಸಿದರೆಂಬ ಆಪಾದನೆಗೊಳಗಾದ ಡಿ.ಐ.ಜಿ.ಯ ಬಗ್ಗೆ ಚುನಾವಣಾ ಆಯೋಗ ವಿಚಾರಣೆ ನಡೆಸುತ್ತಿದೆಯೆಂದು ಕರ್ನಾಟಕದ ಪೋಲೀಸ್ ಮಹಾನಿರ್ದೇಶಕರು ಹೇಳಿದ್ದಾರೆ. ಆದರೆ ಇದೇ ರೀತಿಯ ರಾಜಕೀಯ ಕೆಲಸದ ಹೆಸರಲ್ಲಿ ತನ್ನ "ತನಿಖೆ" ಮುಂದುವರಿಸಲು ಈ ಅಧಿಕಾರಿಗೆ ಅವಕಾಶ ನೀಡಲಾಗಿದೆ.

ಪ್ರತಿಯೊಬ್ಬ ಪ್ರಜಾಪ್ರಭುತ್ವವಾದೀ ನಾಗರಿಕನಿಗೂ ಈ ಎರಡು ಘಟನೆಗಳು ಆತಂಕವುಂಟುಮಾಡಿವೆ. ಇದು ಜನವರಿ 5 ರ ಚುನಾವಣೆಗಳ ಮೇಲೆ ನೇರ ಹಾಗೂ ತಕ್ಷಣದ ಪರಿಣಾಮ ಬೀರುವುದು ಮಾತ್ರವಲ್ಲ, ಇದನ್ನು ಈಗಲೇ ತಡೆಹಿಡಿಯದಿದ್ದರೆ ಚುನಾವಣಾ ವ್ಯವಸ್ಥೆಗೇ ಅಪಾಯವುಂಟಾಗಬಹುದು. ಆದ್ದರಿಂದ ಜನವರಿ 5 ರಂದು ಮತದಾನ ಮಾಡುವ ಮತದಾರರು ಈ ಅಪಾಯವನ್ನು ಮನಗಂಡು ಯಾವ ಆಳುವ ಪಕ್ಷದ ನಿರ್ದೇಶನದ ಪ್ರಕಾರ ಈ ಇಬ್ಬರು ಈ ಅನುಚಿತ ಕೆಲಸದಲ್ಲಿ ತೊಡಗಿದ್ದಾರೋ ಆ ಪಕ್ಷ ಸೋಲುವಂತೆ ಮಾಡುವರೆಂಬ ಆಸೆ ನಾನು ವ್ಯಕ್ತಪಡಿಸುತ್ತೇನೆ.

ಇವು ಹಾಗೂ ಇತರ ಆಡಳಿತ ಯಂತ್ರದ ದುರುಪಯೋಗ, ಹಣದ ಚೆಲ್ಲಾಟ ಹಾಗೂ ಇತರ ಅನ್ಯಾಯದ ವಿಧಾನಗಳನ್ನು ಆಳುವ ಪಕ್ಷ ಅವಲಂಬಿಸಿರುವುದರಿಂದ ಜನವರಿ 5ರ ಚುನಾವಣೆಗಳ ಬಗ್ಗೆ ಆಶಾದಾಯಕ ಭವಿಷ್ಯ ನುಡಿಯುವುದು ಸರಿಯಲ್ಲ. ಆದರೂ ಕಳೆದ ಮೂರು ವರ್ಷಗಳಲ್ಲಿ ಕಂಡು ಬರುತ್ತಿರುವ ರಾಜಕೀಯ ಬದಲಾವಣೆಗಳಿಂದಾಗಿ ಈ ತೊಂದರೆಗಳನ್ನು ಮೀರಿ ಕಾಂಗ್ರೆಸ್(ಐ) ಅವಮಾನಕರ ಸೋಲುಣ್ಣುವಂತೆ ಮಾಡುವುದು ಸಾಧ್ಯವಿದೆ ಎಂದು ನನಗೆ ಸ್ಪಷ್ಟವಾಗಿ ಅನಿಸುತ್ತಿದೆ. ತ್ರಿಪುರಾದ ಎಡರಂಗ 5 ವರ್ಷಗಳ ಹಿಂದೆ ಗಳಿಸಿದ್ದಕ್ಕಿಂತ ಹೆಚ್ಚಿನ ಬಹುಮತ ಗಳಿಸುವುದು ಮಾತ್ರವಲ್ಲ ಈ ಎರಡು ದಕ್ಷಿಣದ ರಾಜ್ಯಗಳಲ್ಲಿ ವಿರೋಧ ಪಕ್ಷಗಳಿಗೆ ಸ್ಪಷ್ಟ ಬಹುಮತ ದೊರೆಯಲಿದೆ.

ನನ್ನ ಈ ಭರವಸೆ ಕಳೆದ ಹದಿನೈದು ದಿನಗಳಲ್ಲಿ ನಾನು ಕಂಡ ಈ ಕೆಳಗಿನ ಸಂಗತಿಗಳನ್ನು ಆಧರಿಸಿದೆ :

ಮೊದಲನೆಯದಾಗಿ, ಮೂರು ವರ್ಷಗಳ ಹಿಂದೆ ಪ್ರಧಾನ ಮಂತ್ರಿಯವರು ಇತ್ತ ಪ್ರತಿಯೊಂದು ವಚನವೂ ಹೇಗೆ ಇನ್ನೂ ಈಡೇರಿಲ್ಲವೆಂಬುದನ್ನು ಜನ ಕಂಡಿದ್ದಾರೆ. ಬಹಳಷ್ಟು ಪ್ರಚಾರ ಪಡೆದ ಅವರ, 'ಸ್ಫೂರ್ತಿದಾಯಕ ವ್ಯಕ್ತಿತ್ವ'ದ ಪ್ರಭಾವವೂ ಅಳಿಯುತ್ತಿದೆ. ಈ ಮೂರು ರಾಜ್ಯಗಳಲ್ಲಿ ಆಕೆಯ ಮನವಿಗಳಿಗೆ ಅತೀ ಕಮ್ಮಿ ಪ್ರತಿಕ್ರಿಯೆ ಕಂಡು ಬಂದಿರುವುದು ಇದಕ್ಕೆ ಉದಾಹರಣೆ. ಇನ್ನೊಂದೆಡೆ ಆಕೆಯ ಪಕ್ಷವನ್ನು ಸೋಲಿಸಬೇಕೆಂಬ ವಿರೋಧ ಪಕ್ಷಗಳ ಮನವಿಗೆ ಅತೀ ಹೆಚ್ಚಿನ ಪ್ರತಿಕ್ರಿಯೆ ಕಂಡು ಬಂದಿದೆ.

ಎರಡನೇಯದಾಗಿ, ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ತೀವ್ರ ಒಡಕನ್ನೆದುರಿಸುತ್ತಿದೆ. ಗುಂಪುಗಳು ಒಂದರೊಡನೆ ಇನ್ನೊಂದು ಕಿತ್ತಾಡುತ್ತಿವೆ. ಕಾಂಗ್ರೆಸ್ (ಐ) ಚುನಾವಣೆ ಗೆದ್ದರೂ ಸ್ಥಿರ ಕಾಂಗ್ರೆಸ್ (ಐ) ಸರಕಾರ ಈ ರಾಜ್ಯಗಳಲ್ಲಿ ಬರಲಾರದು; ಬದಲಾಗಿ ಇನ್ನಷ್ಟು ಗುಂಪು ಕಿತ್ತಾಟಗಳಿಗೆ ನಾಂದಿಯಾಗಬಹುದು ಎಂಬ ಭಾವನೆ ಜನರಲ್ಲಿ ಬರಲಾರಂಭಿಸಿದೆ.

ಮೂರನೇಯದಾಗಿ, 'ಜನತಾ ಅಲೆ'ಯ ಎರಡನೇ ಆವೃತ್ತಿ ಕಂಡು ಬರದಿದ್ದರೂ, ಎಡ ಪಕ್ಷಗಳ ನಡುವೆ, ಕರ್ನಾಟಕದಲ್ಲಿ ಜನತಾ, ಕ್ರಾಂತಿರಂಗಗಳ ನಡುವೆ, ಆಂಧ್ರದಲ್ಲಿ ಜನತಾ, ಲೋಕದಳ ಹಾಗೂ ರಿಪಬ್ಲಿಕನ್ ಪಕ್ಷಗಳ ನಡುವೆ ಒಂದು ರೀತಿಯ ಐಕ್ಯತೆ ಉಂಟಾಗಿದೆ. ಕರ್ನಾಟಕದ ಸೋಮವಾರಪೇಟೆಯಲ್ಲಿದ್ದಂತೆ ವಿರೋಧ ಪಕ್ಷಗಳು ಆಳುವ ಕಾಂಗ್ರೆಸ್ (ಐ) ವಿರುದ್ಧ ಒಗ್ಗಟ್ಟಾಗಿರುವ ಉದಾಹರಣೆಗಳೂ ಇವೆ.

ನಾಲ್ಕನೇಯದಾಗಿ ಹಾಗೂ ಕೊನೆಯದಾಗಿ, ವಿರೋಧ ಪಕ್ಷಗಳು ಹಿಂದೆಂದಿಗಿಂತಲೂ ಹೆಚ್ಚು ಒಗ್ಗಟ್ಟನಿಂದಿವೆ. ತ್ರಿಪುರಾದಲ್ಲಿ ಎಡರಂಗದ ಹೊರಗಿದ್ದ ಸಿ.ಪಿ.ಐ. ಈಗ ಎಡರಂಗದ ಅವಿಭಾಜ್ಯ ಅಂಗವಾಗಿದೆ. 1978ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ (ಐ) ನೊಂದಿಗೆ ಚುನಾವಣಾ ಮೈತ್ರಿ ಹೊಂದಿದ್ದ ಆ ಪಕ್ಷ ಈಗ ಇತರ ಎಡ ಪಕ್ಷಗಳೊಂದಿಗೆ ಇದೆ; ಎಲ್ಲಕ್ಕೂ ಮಿಗಿಲಾಗಿ ಬೂರ್ಜ್ವಾ ಪತ್ರಿಕೆಗಳು ಕಾಂಗ್ರೆಸ್ (ಐ) ಹರಡಲು ಯತ್ನಿಸಿದ "ಮಾಸ್ಕೋ ನಿರ್ದೇಶನ"ದ ಮಿಥ್ಯೆಯನ್ನು ಸಿ.ಪಿ.ಐ.ನ ಕೇಂದ್ರ ಕಾರ್ಯದರ್ಶಿ ಮಂಡಳಿ ಸಂಪೂರ್ಣ ಒಡೆದು ಹಾಕಿದೆ.

ಆದರೂ ನಮ್ಮಲ್ಲಿ ಹಲವರು ಆಶಿಸುವಷ್ಟು ವಿರೋಧ ಪಕ್ಷಗಳು ಒಗ್ಗಟ್ಟಾಗಿಲ್ಲವೆಂಬುದು ನಿಜ. ವಿರೋಧ ಪಕ್ಷಗಳಲ್ಲಿ ದೇಶದ ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳನ್ನು ಭಿನ್ನ ಭಿನ್ನ ದೃಷ್ಟಿಕೋಣದಿಂದ ನೋಡುವ ಪಕ್ಷಗಳಿವೆ ಎಂಬುದನ್ನು ಗಮನಿಸಿದರೆ ಇದನ್ನು ಅರ್ಥಮಾಡಿಕೊಳ್ಳಬಹುದು. "ಜನತಾ ಪ್ರಯೋಗ"ದ ಪುನರಾವರ್ತನೆಯನ್ನು ಪ್ರತೀಕ್ಷಿಸುವುದು ನಿರರ್ಥಕ. ಆ ಪ್ರಯೋಗದ ವೈಫಲ್ಯ ಆ ದಿಕ್ಕಿನಲ್ಲಿ ನಡೆಯಬಹುದಾದ ಪ್ರಯತ್ನಗಳು ನಿರುಪಯೋಗಿ ಎಂಬುದನ್ನು ನಿಸ್ಸಂಶಯವಾಗಿ ತೋರಿಸಿಕೊಟ್ಟಿದೆ ವಾಸ್ತವವಾಗಿ ವಿರೋಧ ಪಕ್ಷಗಳನ್ನು ಸ್ಥೂಲವಾಗಿ ಆಂತರಿಕ ಸಾಮಾಜಿಕಾರ್ಥಿಕ ನೀತಿಗಳು ಹಾಗೂ ವಿದೇಶ ನೀತಿಗೆ ಸಂಬಂಧಪಟ್ಟಂತೆ ಎಡ ಮತ್ತು ಬಲ ಎಂದು ವಿಂಗಡಿಸಬಹುದು. ಇವನ್ನು ಪರಸ್ಪರ ಒಪ್ಪಿಕೊಳ್ಳುವಂತೆ ಮಾಡುವುದು ಅಸಾಧ್ಯ.

ಮೂಲಭೂತ ವಿಷಯಗಳ ಬಗ್ಗೆ ಈ ರೀತಿಯ ಭಿನ್ನಾಭಿಪ್ರಾಯಗಳಿದ್ದರೂ ಎಲ್ಲಾ ವಿರೋಧ ಪಕ್ಷಗಳೂ ಕಾಂಗ್ರೆಸ್ (ಐ)ನ ಅಧಿಕಾರದ ಗುತ್ತೇದಾರಿಕೆಯನ್ನು ಕೊನೆಗೊಳಿಸಬೇಕೆಂಬ ವಿಷಯವನ್ನು ಒಪ್ಪುತ್ತವೆ. ಆದ್ದರಿಂದಲೇ ಬಿಹಾರ ಪತ್ರಿಕಾ ಮಸೂದೆ, ರಾಷ್ಟ್ರೀಯ ಭದ್ರತಾ ಶಾಸನ, ಎಸ್ಮಾ ಇತ್ಯಾದಿ ಪ್ರಶ್ನೆಗಳ ಮೇಲೆ ಸಂಯುಕ್ತ ಹೋರಾಟಗಳು ಬೆಳೆಯುತ್ತಿವೆ. ಎಲ್ಲಾ ಅಖಿಲ ಭಾರತ ಕಾರ್ಮಿಕ ಸಂಘಗಳ ಕೇಂದ್ರಗಳ ರಾಷ್ಟ್ರೀಯ ಆಂದೋಲನ ಸಮಿತಿಯ ಚಟುವಟಿಕೆಗಳೂ ದುಡಿಯುವ ಜನರ ಒಗ್ಗಟ್ಟನ್ನು ಸೂಚಿಸುತ್ತವೆ. ಜನವರಿ 5 ರ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ)ನ ಸೋಲು ಕಾಂಗ್ರೆಸ್ (ಐ)ನ ಏಕಾಧಿಕಾರದ ವಿರುದ್ಧ ಸಂಯುಕ್ತ ಹೋರಾಟದ ಪ್ರಕ್ರಿಯೆಯನ್ನು ನಿಸ್ಸಂಶಯವಾಗಿಯೂ ಮತ್ತಷ್ಟು ಬಲಗೊಳಿಸುತ್ತದೆ. ಈಗಾಗಲೇ ಆಳುವ ಕಾಂಗ್ರೆಸ್ (ಐ)ಗೆ ಪ್ರತಿಯಾಗಿ ಎಡ ಹಾಗೂ ಪ್ರಜಾಪ್ರಭುತ್ವ ಪರ್ಯಾಯವನ್ನು ಜನತೆಯ ಮುಂದಿಟ್ಟಿರುವ ಎಡ ಪಕ್ಷಗಳ ಒಗ್ಗಟ್ಟನ್ನು ಇದು ಮತ್ತಷ್ಟು ಗಟ್ಟಿಗೊಳಿಸುತ್ತದೆ.

○

ಎಸ್.ಎಫ್.ಐ. ನ ೧೨ನೇ ವಾರ್ಷಿಕೋತ್ಸವ

ಬೆಂಗಳೂರು :

ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಹನ್ನೆರಡನೇ ವಾರ್ಷಿಕೋತ್ಸವವನ್ನು ಬೆಂಗಳೂರು ನಗರ ಸಮಿತಿ ದಿನಾಂಕ 30-12-82 ರಂದು ಆಚರಿಸಿತು.

ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್ ಆರಾಧ್ಯ ಅವರು ಧ್ವಜಾರೋಹಣ ಮಾಡಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಎಸ್. ಎಫ್. ಐ. ನ ಧ್ಯೇಯೋದ್ದೇಶಗಳನ್ನು ಕುರಿತು ಮಾತನಾಡಿದರು ಎಸ್.ಎಫ್.ಐ.ನ ನಗರ ಸಮಿತಿ ಕಾರ್ಯದರ್ಶಿ ಕಾಂ। ಜಿ. ಎನ್. ಮೋಹನ್ ಸ್ವಾಗತಿಸಿದರು. ಪ್ರಸಕ್ತ ಚುನಾವಣೆಯಲ್ಲಿ ವಿದ್ಯಾರ್ಥಿ ವರ್ಗ ವಿರೋಧ ಪಕ್ಷಗಳ ಅಭ್ಯರ್ಥಿಗಳನ್ನು ಬೆಂಬಲಿಸಿ ವಿದ್ಯಾರ್ಥಿ—ಜನ ವಿರೋಧಿ ಕಾಂಗ್ರೆ ಪಕ್ಷವನ್ನು ಸೋಲಿಸಬೇಕೆಂದು ಕರೆ ನೀಡಲಾಯಿತು.

ರಾಯಚೂರು :

ರಾಯಚೂರು ಜಿಲ್ಲೆಯ ಮುದಗಲ್ಲಿನ ಎಸ್. ಎಫ್. ಐ. ಘಟಕವು ಎಸ್ ಎಫ್ ಐ ನ 12ನೇ ವಾರ್ಷಿಕೋತ್ಸವದ ಅಂಗವಾಗಿ 'ಇಂದಿನ ಶಿಕ್ಷಣ ಪದ್ಧತಿ' ಕುರಿತು ಭಾಷಣವನ್ನು ಏರ್ಪಡಿಸಿತ್ತು. ಭಾಷಣಕಾರರಾಗಿ ವಕೀಲರಾದ ಕಾಂ। ಶರಣಪ್ಪ ನಾಗಲಾಪೂರ ಆಗಮಿಸಿದ್ದರು.

ಆರಂಭದಲ್ಲಿ ಕಾಂ। ಅನಿಲ್‌ಕುಮಾರ್ ಸ್ವಾಗತ ಕೋರಿದರು ಸಮಾರಂಭದ ಅಧ್ಯಕ್ಷತೆಯನ್ನು ಇತಿಹಾಸದ ಉಪನ್ಯಾಸಕರಾದ ಶ್ರೀ ಕೇದಾರನಾಥ್ ಶಾಸ್ತ್ರಿಯವರು ವಹಿಸಿದ್ದರು. ಕೊನೆಯಲ್ಲಿ ಕಾಂ। ಅಶೋಕಗೌಡ ವಂದನಾರ್ಪಣೆ ಸಲ್ಲಿಸಿದರು.

ಬೀಜಾಪುರ :

ದಿನಾಂಕ 30-12-1982 ರಂದು ಎಸ್. ಎಫ್. ಐ. ನ 12ನೇ ವಾರ್ಷಿಕೋತ್ಸವ ದಿನಾಚರಣೆಯನ್ನು ಬಿಜಾಪುರದಲ್ಲಿ ಆಚರಿಸಲಾಯಿತು. ವಿಜಯ ಕಾಲೇಜಿನಿಂದ ಎಸ್.ಎಫ್.ಐ. ಬಿಜಾಪುರ ಘಟಕದ ಉಪಾಧ್ಯಕ್ಷರಾದ ಕಾಂ। ಎಲ್.ವಿ. ಸೊನ್ನದ ಹಾಗೂ ಖಜಾಂಚಿ ಪಿ. ಬಿ. ನರೇಗಲರ ನೇತೃತ್ವದಲ್ಲಿ

(7 ನೇ ಪುಟ ನೋಡಿ)

ಪಕ್ಷದ ಸದಸ್ಯತ್ವದಿಂದ ಅಮಾನತ್ತು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಗುಲ್ಬರ್ಗಾ ಜಿಲ್ಲಾ ಸಮಿತಿಯು ದಿನಾಂಕ 4-1-1983 ರಂದು ಸಭೆ ಸೇರಿ ಕಾಂ। ಸಿ. ಬಿ. ಪಾಟೀಲ್ ಓಕಳಿ ಅವರನ್ನು ಪಾರ್ಟಿ ಸದಸ್ಯತ್ವದಿಂದ ಕೂಡಲೇ ಸಸ್ಪೆಂಡ್ ಮಾಡಲಾಗಿದೆಯೆಂದು ಪಕ್ಷದ ಗುಲ್ಬರ್ಗಾ ಜಿಲ್ಲಾ ಸಮಿತಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಸಿ. ಬಿ. ಪಾಟೀಲರ ಕೆಲವು ಚಟುವಟಿಕೆಗಳು ಪಕ್ಷದ ರಾಜಕೀಯ ನೀತಿಗೆ ವಿರುದ್ಧವಾಗಿರುವುದು ಮತ್ತು ಪಕ್ಷದ ಗೌರವಕ್ಕೆ ಧಕ್ಕೆಯುಂಟು ಮಾಡುತ್ತಿರುವುದು ಜಿಲ್ಲಾ ಸಮಿತಿಯ ಗಮನಕ್ಕೆ ಬಂದಿರುವುದಾಗಿ ಹೇಳಿಕೆಯು ತಿಳಿಸಿದೆ.

ಸೋವಿಯತ್ ಒಕ್ಕೂಟದ ಸ್ಥಾಪನೆ :

ನಮಗೊಂದು ಮಹಾನ್ ಪಾಠ

1922ರಲ್ಲಾದ ಸೋವಿಯತ್ ಗಣರಾಜ್ಯ ಒಕ್ಕೂಟದ ಸ್ಥಾಪನೆಯು ಅಕ್ಟೋಬರ್ ಕ್ರಾಂತಿಯ ಮತ್ತು ಜನಾಂಗ ಪ್ರಶ್ನೆಯ ಕುರಿತಾದ ಲೆನಿನ್‌ವಾದೀ ಧೋರಣೆಗಳ ನೇರ ಫಲವಾಗಿದೆ. ಮೊದಲು ಬಂಧೀಖಾನೆಗಳಾಗಿದ್ದ ಜನಾಂಗಗಳು ಈಗ ಸಮಾನತೆಯ ಆಧಾರದ ಮೇಲೆ ಸ್ವಯಂಪ್ರೇರಿತವಾಗಿ ಒಂದುಗೂಡಿವೆ. ಸಮಾಜವಾದಿ ಕ್ರಾಂತಿಯ ಶ್ರಮಜೀವಿಗಳ ಪ್ರಭುತ್ವ ಶಕ್ತಿಯ ಮತ್ತು ಲೆನಿನ್‌ವಾದಿ ಮಾರ್ಗದರ್ಶನದ ಗೆಲುವುಗಳು ಈ ಚಾರಿತ್ರಿಕ ಸಾಧನೆಯ ಹಿನ್ನೆಲೆಯಲ್ಲಿರುವ ಶಕ್ತಿಗಳಾಗಿವೆ.

ಬಂಡವಾಳಶಾಹೀ ಪ್ರಭುತ್ವದ ಅಡಿಯಲ್ಲಿ ಬಹುಜನಾಂಗೀಯ ಪ್ರಭುತ್ವವು ದುರ್ಬಲ ಜನಾಂಗಗಳನ್ನು ಬಲವಂತವಾಗಿ ತನ್ನ ಪ್ರಭುತ್ವದೊಡನೆ ಸೇರಿಸಿಕೊಳ್ಳಲಾಗಿತ್ತು. ಬೂರ್ಷ್ವಾ ಆಡಳಿತಗಾರರು ಇಂತಹ ಪ್ರಭುತ್ವದಲ್ಲಿ ಯಾವಾಗಲೂ ಜನಾಂಗಗಳಿಗೆ ಸಮಾನತೆಯನ್ನು ಒದಗಿಸಿರಲಿಲ್ಲ. ಜನಾಂಗ ಹಗೆತನವನ್ನು ಅವರು ನಿಲ್ಲಿಸಲಾಗದೆ, ಅನ್ಯಾಯವನ್ನು, ಭಾಷಾ ಅಸಮಾನತೆಯನ್ನು, ದುರ್ಬಲ ಜನಾಂಗಗಳ ಸಂಸ್ಕೃತಿಯ ವಿರುದ್ಧ ಪಕ್ಷಪಾತವನ್ನು ಅನುಸರಿಸುತ್ತಾರೆ. ಏಕೆಂದರೆ ಉತ್ಪಾದನಾ ಮೂಲದಲ್ಲಿನ ಖಾಸಗಿ ಆಸ್ತಿಯು ಜನಾಂಗಗಳ ನಡುವಿನ ಅಸಮಾನತೆ, ಕಲಹಗಳನ್ನು ಒಳಗೊಂಡಂತೆ ಎಲ್ಲಾ ಅಸಮಾನತೆಗಳ ಮೂಲವಾಗಿದೆ. 1913ರಷ್ಟು ಹಿಂದೆಯೇ ಲೆನಿನ್ನರು ಹೀಗೆ ಬರೆದಿದ್ದರು.

"ಇಡೀ ಜಗತ್ತಿನ ಕಾರ್ಮಿಕರು ಅವರದೇ ಆದ ಅಂತರ ರಾಷ್ಟ್ರೀಯವಾದೀ ಸಂಸ್ಕೃತಿಯೊಂದನ್ನು ರೂಪಿಸುತ್ತಿದ್ದಾರೆ. ಅದು ಸ್ವಾತಂತ್ರ್ಯದ ಮುಂಚೂಣಿಯಾಗಿ ಮತ್ತು ಶೋಷಣೆಯ ವೈರಿಯಾಗಿ ಬೆಳೆಯತೊಡಗಿದೆ. ಹಳೆಯ ಜಗತ್ತಿಗೆ, ಜನಾಂಗ ದಬ್ಬಾಳಿಕೆಯ ಲೋಕಕ್ಕೆ, ಜನಾಂಗ ಕೆಲಸಕ್ಕೆ ಮತ್ತು ಜನಾಂಗ ಬೇರ್ಪಡಿಸುವಿಕೆಗೆ ಪ್ರತಿಯಾಗಿ ಕಾರ್ಮಿಕರು ಒಂದು ಹೊಸ ಜಗತ್ತನ್ನು, ಎಲ್ಲಾ ಜನಾಂಗಗಳ ಕಾರ್ಮಿಕರ ಐಕ್ಯತೆಯ ಜಗತ್ತನ್ನು, ಮಾನವನಿಂದ ಮಾನವನ ಶೋಷಣೆಯಿಲ್ಲದ ಜಗತ್ತನ್ನು ತೋರಿಸಿಕೊಡುತ್ತಿದ್ದಾರೆ."

ಕ್ರಾಂತಿಕಾರೀ ಹೋರಾಟದ ಅವಧಿಯಲ್ಲಿ ಬೊಲ್ಷೆವಿಕ್ ಪಕ್ಷದ ರಾಷ್ಟ್ರೀಯ ಧೋರಣೆ ಇದೇ ಆಗಿತ್ತು. ಜನಾಂಗಗಳು ರಷ್ಯಾದಲ್ಲಿ ತಾವೇ ಸ್ವಯಂ ನಿರ್ಣಯ ಕೈಗೊಳ್ಳಬೇಕೆಂದು ಪಕ್ಷವು ಅಪೇಕ್ಷಿಸಿತ್ತು. ಅದೇ ಸಂಧರ್ಭದಲ್ಲಿ ಪಕ್ಷವು ಶ್ರಮಜೀವಿ ಪಕ್ಷವಾಗಿದ್ದು ಎಲ್ಲಾ ಜನಾಂಗಗಳ ಕಾರ್ಮಿಕ ವರ್ಗವನ್ನು ಒಂದೇ ಸಂಘಟನೆಯ ಅಡಿಯಲ್ಲಿ ತಂದು ರಾಷ್ಟ್ರೀಯ ಬಂಡವಾಳಗಾರರ ವಿರುದ್ಧ ಹೋರಾಟ ನಡೆಸಿತ್ತು. ಸ್ವಯಂ ನಿರ್ಣಯದ ನಿಜವಾದ ತಿರುಳನ್ನು ವಿವರಿಸುತ್ತಾ, ಲೆನಿನ್ನರು ಹೀಗೆ ಹೇಳುತ್ತಾರೆ: "ಜನಾಂಗಗಳಿಗೆ ಸ್ವಯಂ ನಿರ್ಣಯದ ಹಕ್ಕು ಕೊಡುವುದರ ಅರ್ಥ ದಬ್ಬಾಳಿಕೆ ನಡೆಸುವ ಜನಾಂಗದಿಂದ ವಿಮೋಚನೆಗೊಂಡು ರಾಜಕೀಯ ಪ್ರತ್ಯೇಕತೆಯನ್ನು ಕಾಪಾಡಿಕೊಳ್ಳುವ ಹಕ್ಕನ್ನು ಗಳಿಸಿಕೊಳ್ಳುವುದೇ ಆಗುತ್ತದೆ. ಆದ್ದರಿಂದ ಈ ಬೇಡಿಕೆಯನ್ನು, ಪ್ರತ್ಯೇಕತೆಯ, ಮತ್ತು ಪುಟ್ಟ ರಾಜ್ಯ ರಚನೆಯ ಬೇಡಿಕೆಯೊಂದಿಗೆ ಸಮೀಕರಿಸಲಾಗುವುದಿಲ್ಲ".

ಅಕ್ಟೋಬರ್ ಕ್ರಾಂತಿಯು ಉತ್ಪಾದನಾ ಸಾಧನಗಳನ್ನು ಸಾಮಾಜೀಕರಣ ಮಾಡುವ ಮೂಲಕ ಶೋಷಣೆ, ಖಾಸಗಿ ಆಸ್ತಿಯನ್ನು ಅಸಮಾನತೆಯನ್ನು ಮತ್ತು ಜನಾಂಗಗಳ ಮೇಲಿನ ದಬ್ಬಾಳಿಕೆಯನ್ನು ಕೊನೆಗೊಳಿಸಿದೆ. ಶ್ರಮಜೀವಿ ಪ್ರಭುತ್ವವು ಒದಗಿಸಿರುವ ವ್ಯವಸ್ಥೆಯು ಪ್ರತ್ಯೇಕತೆ ಮತ್ತು ವಿಚ್ಛಿದ್ರತೆಗಳನ್ನು ಅಸಂಬದ್ಧಗೊಳಿಸುವಂತೆ ಮಾಡಿದೆ. ಶ್ರಮಜೀವಿಗಳ ಪ್ರಭುತ್ವ ಶಕ್ತಿ ಮತ್ತು ಜನಾಂಗಗಳ ಕುರಿತಾದ ಲೆನಿನ್‌ವಾದೀ ಧೋರಣೆಗಳು ಘಟಕಗಳಿಗೆ ಸಮಾನತೆಯ ಆಧಾರದ ಮೇಲೆ ಸಮಾಜವಾದೀ ಬಹುಜನಾಂಗ ರಾಜ್ಯವನ್ನು ಸ್ಥಾಪಿಸಲು ಹಾದಿ ಮಾಡಿಕೊಟ್ಟಿತು. ಜಗತ್ತು ಹಿಂದೆಂದೂ ಇಂತಹದೊಂದು ಪ್ರಭುತ್ವವನ್ನು ಕಂಡಿರಲಿಲ್ಲ.

ಜನಾಂಗ ಪ್ರಶ್ನೆಯ ಕುರಿತಾಗಿ ಸರಿಯಾದ ಧೋರಣೆಗಾಗಿ ಬೊಲ್ಷೆವಿಕ್ ಪಕ್ಷವು ನಡೆಸಿದ ಧೀರ್ಘ ಹೋರಾಟದ ನಂತರವೂ ಕೂಡ ರಷ್ಯಾದ ಜನಾಂಗಗಳನ್ನು ಕ್ರಮಬದ್ಧವಾಗಿ, ಸ್ವಯಂ ಪ್ರೇರಿತವಾಗಿ ಒಂದುಗೂಡಿಸಲು ಐದು ವರ್ಷಗಳು ಬೇಕಾಯಿತು. ತ್ಸಾರನ ಅಡಿಯಲ್ಲಿ ಶತಮಾನಗಳಿಂದ ನಡೆದು ಬಂದಿದ್ದ ದಬ್ಬಾಳಿಕೆಯು ಜನಾಂಗಗಳಲ್ಲಿ ಆಳವಾಗಿ ಅಪನಂಬಿಕೆಯನ್ನು ಮೂಡಿಸಿದ್ದವು ಅವುಗಳನ್ನು ಅಷ್ಟು ಸುಲಭವಾಗಿ ಅಳಿಸಿಹಾಕುವುದು ಸಾಧ್ಯವಿರಲಿಲ್ಲ.

ಕ್ರಾಂತಿಯ ವಿಜಯದ ಪ್ರಥಮ ಕಾರ್ಯಗಳಲ್ಲೊಂದು ರಷ್ಯಾದ ಜನತೆಯ ಹಕ್ಕುಗಳನ್ನು ಘೋಷಿಸಿದ್ದು.

ಜನಾಂಗಗಳಿಗಿರುವ ಸ್ವಯಂ ನಿರ್ಣಯದ ಹಕ್ಕು, ಅವುಗಳು ಪ್ರತ್ಯೇಕಗೊಳ್ಳುವ ಹಕ್ಕನ್ನು ಒಳಗೊಂಡಂತೆ, ಜನಾಂಗಗಳ ಸಮಾನತೆ, ಸ್ವಯಂ ಪ್ರೇರಣೆಯಿಂದ ಒಂದುಗೂಡುವ ಹಕ್ಕುಗಳನ್ನು ಸಹ ಅದು ಘೋಷಿಸಿತು.

ಕೆಲವು ಜನಾಂಗಗಳು ಫಿನ್‌ಲೆಂಡ್ ಮತ್ತು ಪೋಲೆಂಡ್‌ಗಳನ್ನೊಳಗೊಂಡಂತೆ ಸ್ವತಂತ್ರ ರಾಜ್ಯಗಳನ್ನು ಹೊಂದಿದರು. ಆದರೆ ಇತರರು ಒಪ್ಪಂದದ ಆಧಾರದ ಮೇಲೆ ಸೋವಿಯತ್ ರಷ್ಯಾದೊಡನೆ ಸಂಬಂಧಗಳನ್ನು ಸ್ಥಾಪಿಸಿಕೊಂಡು ಸಮಾಜವಾದೀ ಪ್ರಭುತ್ವದೆಡೆಗೆ ಬರತೊಡಗಿದರು.

ಸೋವಿಯತ್ ಪ್ರಭುತ್ವವು ಅನುಸರಿಸಿದ ಕಾರ್ಯಶೀಲ ಧೋರಣೆಯಿಂದಾಗಿ ಜನಾಂಗಗಳ ನಡುವಿನ ಗೋಡೆ ಉರುಳಿಬಿದ್ದು 1922 ರಲ್ಲಿ ಉಕ್ರೈನ್, ಬೈಲೋರಷ್ಯಾ, ಜಾರ್ಜಿಯಾ ಮುಂತಾದವುಗಳು ಸ್ವಯಂ ಪ್ರೇರಣೆಯಿಂದ ಒಕ್ಕೂಟವನ್ನು ಸೇರಿಕೊಂಡವು. ಇಂದು ಸೋವಿಯತ್ ಯೂನಿಯನ್ನಿನಲ್ಲಿ ಹದಿನೈದು ಒಕ್ಕೂಟ ಗಣರಾಜ್ಯಗಳು, ಎಂಟು ಸ್ವಯಂಮಾಡಳಿತ ಪ್ರದೇಶಗಳೂ ಮತ್ತು ಹತ್ತು ಸ್ವಯಂಮಾಡಳಿತ ಕ್ಷೇತ್ರಗಳೂ ಇವೆ.

ವಿವಿಧ ಜನಾಂಗಗಳೂ ಮತ್ತು ಜನತೆ ಒಂದೇ ಪ್ರಭುತ್ವದಡಿ ಐಕ್ಯಗೊಂಡದ್ದು ಸಮಾಜವಾದೀ ಕ್ರಾಂತಿಯ ಶಕ್ತಿಯನ್ನು ಹೆಚ್ಚಿಸಿ ಬಂಡವಾಳಶಾಹಿಗಳ ಹೀನ ಪ್ರಯತ್ನಗಳನ್ನು ಯಶಸ್ವಿಯಾಗಿ ಎದುರಿಸಲು ಸಾಧ್ಯವಾಯಿತು. ಸಮಾಜವಾದೀ ಬೆಳವಣಿಗೆಯ ಯಶಸ್ವೀ ಕ್ರಿಯೆಯಲ್ಲಿ ಕಂಡು ಬಂದ ಅಭೇದ್ಯವಾದ ಐಕ್ಯತೆಯು ಫ್ಯಾಸಿಸ್ಟ್ ವಿರೋಧಿ ಯುದ್ಧದಲ್ಲಿ ಮತ್ತೊಮ್ಮೆ ಉಜ್ವಲವಾಗಿ ಬೆಳಗಿತು. ಯುದ್ಧದ ಸಮಯದಲ್ಲಿ ಎಲ್ಲ ಜನಾಂಗಗಳ ಜನತೆ ತಮ್ಮ ತಾಯ್ನಾಡಿನ ಸ್ವಾತಂತ್ರ್ಯವನ್ನು ರಕ್ಷಿಸಲು ತಮ್ಮಿಂದ ಸಾಧ್ಯವಾದಷ್ಟು ತ್ಯಾಗವನ್ನು ಮಾಡಿದರು.

ಜನಾಂಗ ಸಮಾನತೆಯನ್ನು ಕೇವಲ ಘೋಷಣೆಯಿಂದ ಸಾಧಿಸಲು ಸಾಧ್ಯವಿರಲಿಲ್ಲ. ಘೋಷಣೆಗೆ ಸೂಕ್ತವಾದ ಧೋರಣೆಯೊಂದರ ಅವಶ್ಯಕತೆಯಿತ್ತು. ಲೆನಿನ್ನರ ನಾಯಕತ್ವದಲ್ಲಿ ರೂಪುಗೊಂಡಿದ್ದ ಬೋಲ್ಷೆವಿಕ್ ಪಕ್ಷವು ಈ ಧೋರಣೆಯನ್ನು ಹೊಂದಿತ್ತು. ಕೆಲವು ಪ್ರದೇಶಗಳ ತೀವ್ರ ಆರ್ಥಿಕ ಹಿಂದುಳಿದಿರುವಿಕೆಯನ್ನು ಸರಿಪಡಿಸುವುದು ಹೇಗೆಂಬ ಸಮಸ್ಯೆ ಎದುರಾಯಿತು. ಕೆಲವು ಪ್ರದೇಶಗಳಂತೂ ಫ್ಯೂಡಲ್ ವ್ಯವಸ್ಥೆಗೂ ಹಿಂದಿನ ಅಲೆಮಾರೀ ಘಟ್ಟದಲ್ಲೇ ಉಳಿದಿದ್ದವು. ಈ ಪರಿಸ್ಥಿತಿಯಲ್ಲಿ ಕೇವಲ ಸದುದ್ದೇಶವಾಗಲೀ, ಘೋಷಣೆಯಾಗಲೀ ಸಾಕಾಗುವುದಿಲ್ಲ. ತಮ್ಮ ಶತಮಾನಗಳ ಹಿಂದಿನ ಹಿನ್ನಡೆಗಳ ವಿರುದ್ಧ ವಿಜಯ ಸಾಧಿಸಿ, ಕಡಿಮೆ ಅವಧಿಯಲ್ಲಿ ಮುಂದುವರಿದ ವಿಭಾಗದೊಂದಿಗೆ ಸರಿಸಮವಾಗಿ ಮುನ್ನಡೆಯಬಲ್ಲಂತಹ ಧೋರಣೆ ಅತ್ಯಂತ ಅಗತ್ಯವಾಗಿತ್ತು.

ಅಂತಹುದೊಂದು ಧೋರಣೆ ಕಾರ್ಯಗತಗೊಂಡಿತು ಏಕೆಂದರೆ ಖಾಸಗೀ ಆಸ್ತಿ ಮತ್ತು ಶೋಷಣೆಗಳು ಸೃಷ್ಟಿಸಿದ್ದ ಎಲ್ಲಾ ಅಡ್ಡಿಗಳೂ ನಿವಾರಣೆಗೊಂಡಿದ್ದವು.

ಹೆಚ್ಚಿನ ಬೆಳವಣಿಗೆಯ ಪ್ರಮಾಣ, ಪ್ರಾಮುಖ್ಯತೆಗೆ ಗಮನ, ಫ್ಯಾಕ್ಟರಿಗಳ ವರ್ಗಾವಣೆ, ಕುಶಲ ಕಾರ್ಮಿಕರ, ಎಂಜಿನಿಯರುಗಳು ಮತ್ತಿತರರ ತಂಡಗಳನ್ನು ಹಿಂದುಳಿದ ಪ್ರದೇಶಗಳಿಗೆ ಕಳುಹಿಸಿ ಆಧುನಿಕ ಸಮಾಜವನ್ನು ನಿರ್ಮಿಸುವುದು — ಮುಂತಾದ ವಸ್ತುನಿಷ್ಠ ಕ್ರಮಗಳನ್ನು ಅಸಮಾನತೆಯನ್ನು ಮತ್ತು ಹಿಂದುಳಿದಿರುವಿಕೆಯನ್ನು ನಿವಾರಿಸಿ ಸೇರ್ಪಡೆಯಾಗಿರುವ ಗಣರಾಜ್ಯಗಳಿಗೆ ತಾವು ಸಮಾನಭಾಗಿಗಳೆಂಬ ಭಾವನೆಯನ್ನು ಮೂಡಿಸಿತು. ಐದು ದಶಕಗಳ ಹಿಂದೆ ಅಲೆಮಾರಿ ಘಟ್ಟದಲ್ಲಿದ್ದ ಜನರು ಇಂದು ಆಧುನಿಕ ವಿಜ್ಞಾನ ಮತ್ತು ಕೈಗಾರಿಕೆಗಳೊಂದಿಗೆ ಆಧುನಿಕ ಜನಾಂಗವಾಗಿ ಬೆಳೆದಿದ್ದಾರೆ.

ಶತಮಾನಗಳಿಂದ ಜ್ಞಾನ ಮತ್ತು ಸಂಪತ್ತುಗಳಿಂದ ವಂಚಿತರಾಗಿದ್ದ ಜನತೆಯು ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಇಷ್ಟೊಂದು ಶೀಘ್ರಗತಿಯಲ್ಲಿ ಅಭಿವೃದ್ಧಿ ಸಾಧಿಸಿದ್ದನ್ನು ಜಗತ್ತು ಹಿಂದೆಂದೂ ಕಂಡಿರಲಿಲ್ಲ. ಕೇವಲ ಸಮಾಜವಾದೀ ಪ್ರಭುತ್ವ ಮತ್ತು ಸಮಾಜವಾದೀ ಸಮಾಜ ಮಾತ್ರ ಇಂತಹ ಚಮತ್ಕಾರವನ್ನು ಸಾಧಿಸಲು ಸಾಧ್ಯವಾಯಿತು. ಜನಾಂಗಗಳ ನಡುವೆ ಶಾಶ್ವತವಾದ ಸಹೋದರತ್ವವನ್ನು ಸ್ಥಾಪಿಸುವ ಮತ್ತು ಘರ್ಷಣೆಗಳಿಂದ ಮುಕ್ತವಾದ ಹೊಸ ಮನುಷ್ಯರನ್ನು ಸೃಷ್ಟಿಸುವ ಮಾರ್ಗಕ್ಕೆ ಇದೊಂದು ಚಾರಿತ್ರಿಕ ಉದಾಹರಣೆಯಾಗಿದೆ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಸಿದ್ಧಾಂತ ಮತ್ತು ಅನುಷ್ಠಾನಕ್ಕೆ ದೊರೆತ ಮಹಾನ್ ವಿಜಯ ಇದಾಗಿದೆ.

ಸಮಾಜವಾದದೊಡನೆ ಬೆಸೆದುಕೊಂಡಿರುವ ಬಲಿಷ್ಠ ಬಹುಜನಾಂಗೀಯ ಪ್ರಭುತ್ವವು ನ್ಯೂಕ್ಲಿಯರ್ ಯುದ್ಧ ಭೀತಿಯನ್ನೊಡ್ಡುತ್ತಿರುವ ಸಾಮ್ರಾಜ್ಯಶಾಹಿಗಳಿಗೆದುರಾಗಿ ಮತ್ತು ಜಾಗತಿಕ ಶಾಂತಿಗಾಗಿ ಹೋರಾಟ ನಡೆಸುತ್ತಿರುವ ಬಹುದೊಡ್ಡ ಶಕ್ತಿಯಾಗಿದೆ ಈ ಶಕ್ತಿಯ ಆರ್ಥಿಕ ಮುನ್ನಡೆ, ಮಿಲಿಟರಿ ಶಕ್ತಿ, ಆಂತರಿಕ ಒಗ್ಗಟ್ಟು ಮತ್ತು ತ್ಯಾಗಶೀಲತೆಗಳು ಯುದ್ಧದಿಂದ ಜಗತ್ತನ್ನು ರಕ್ಷಿಸಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ.

ಸೋವಿಯತ್ ಜನತೆಯ ಈ ಐಕ್ಯತೆ ಮತ್ತು ಸ್ನೇಹಶೀಲತೆಗಳಿಗೆ ಜನಾಂಗಗಳ ಪರಸ್ಪರ ಬೆರೆಯುವಿಕೆಯು, ಪರಸ್ಪರ ಸಹಾಯ ಮತ್ತು ತ್ಯಾಗಗಳಿಂದ ಹುಟ್ಟಿದ ಅಂತರ ರಾಷ್ಟ್ರೀಯ ಪ್ರಜ್ಞೆಯು ಆಧಾರವಾಗಿದೆ. ಇಲ್ಲಿ ಪ್ರತ್ಯೇಕತಾ ಭಾವನೆಗೆ ವಿರುದ್ಧವಾಗಿ ಸಂಸ್ಕೃತಿ ಮತ್ತು ಅಂತರ ರಾಷ್ಟ್ರೀಯ ಭಾವನೆಗಳು ಸಂಯೋಗಗೊಂಡಿವೆ. ಜನತೆಗೆ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಪಕ್ಷದ ಮಾರ್ಗದರ್ಶನ ಇದನ್ನು ಸಾಧ್ಯವಾಗಿಸಿದೆ.

ಭಾರತೀಯ ಜನತೆಯ ಒಗ್ಗಟ್ಟು ಬೇರೆ ಬೇರೆ ಮೂಲಗಳಿಂದ ಆಕ್ರಮಣವನ್ನೆದುರಿಸುತ್ತಿರುವ ಈ ಸಂದರ್ಭದಲ್ಲಿ ಸೋವಿಯತ್ ಜನತೆಯಿಂದ ನಾವು ಪಾಠ ಕಲಿಯಬೇಕಾಗಿದೆ. ಸ್ವಾತಂತ್ರ್ಯನಂತರದ ಮೂರು ದಶಕಗಳು ಭಾರತದ ಐಕ್ಯತೆಯನ್ನು ಮಣ್ಣುಗೂಡಿಸಿದೆ. ಮತೀಯ ಮತ್ತು ಕೋಮು ಘರ್ಷಣೆಗಳು, ಜಾತಿ ಗಲಭೆಗಳು, ಹಿಂದುಳಿದ ಛಿದ್ರಕಾರೀ ಚಳವಳಿಗಳು, ಪ್ರಾದೇಶಿಕ ಮತ್ತು ಇತರ ಸಂಕುಚಿತವಾದಗಳು ಜನತೆಯಲ್ಲಿ ಆಗಾಗ ಭಾವೋದ್ರೇಕವನ್ನು ಸೃಷ್ಟಿಸಿ ವರ್ಗಪ್ರಜ್ಞೆ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ನಾಶ ಮಾಡುತ್ತದೆ-ಇದು ನಮ್ಮ ಜನತೆಯು ಎದುರಿಸುತ್ತಿರುವ ಪ್ರಮುಖ ಸಮಸ್ಯೆಯಾಗಿದೆ. ಕಾಂಗ್ರೆಸ್ ಪಕ್ಷದ ನೇತೃತ್ವದ ಬಂಡವಾಳಶಾಹೀ-ಭೂಮಾಲಿಕ ಸರ್ಕಾರ ರಾಷ್ಟ್ರೀಯ ಐಕ್ಯತೆಯನ್ನು ಶಿಥಿಲಗೊಳಿಸುತ್ತಿದೆ, ಈ ಸರ್ಕಾರ ಇವನ್ನು ಸರಿಪಡಿಸಲು ಸಾಧ್ಯವಿಲ್ಲ. ಏಕೆಂದರೆ ಶ್ರೀಮಂತ ವರ್ಗಗಳ ವಿರುದ್ಧ ಗ್ರಾಮೀಣ ಪ್ರದೇಶಗಳ ಊಳಿಗಮಾನ್ಯ ಮತ್ತು ಅರೆಊಳಿಗಮಾನ್ಯ ಪದ್ಧತಿಯ ವಿರುದ್ಧ ಹೋಗುವುದು ಇದಕ್ಕೆ ಬೇಕಿಲ್ಲ. ಹಳೆಯ ಸಂಕೋಲೆಗಳನ್ನು ಕಿತ್ತೊಗೆದು ಶೀಘ್ರ ಕೈಗಾರಿಕಾಭಿವೃದ್ಧಿಯತ್ತ ದೇಶವನ್ನು ಮುನ್ನಡೆಸುವುದು ಈ ಸರ್ಕಾರದಿಂದ ಸಾಧ್ಯವಿಲ್ಲ. ಹಾಗೆಯೇ ಹಿಂದುಳಿದ ಪ್ರದೇಶಗಳಿಗೆ ನ್ಯಾಯ ಒದಗಿಸುವುದು ಕೂಡ ಇದಕ್ಕೆ ಸಾಧ್ಯವಿಲ್ಲ.

ಜನಾಂಗಗಳ ಮತ್ತು ಹಿಂದುಳಿದಿರುವಿಕೆಯ ಸಮಸ್ಯೆಯನ್ನು ಶ್ರಮಜೀವಿ ಪ್ರಭುತ್ವವು ಪರಿಹರಿಸಿ ದೇಶದ ಐಕ್ಯತೆಯನ್ನು ಕಾಪಾಡಿದೆ. ಬಂಡವಾಳಶಾಹೀ ಭೂಮಾಲಿಕ ಸರ್ಕಾರವು ಇದನ್ನು ಸಾಧಿಸಲಾಗದೆ ದೇಶಾದ್ಯಂತ ಅನೈಕ್ಯತೆ ಬೆಳೆಯುತ್ತಿದೆ. ಕಾರ್ಮಿಕ ವರ್ಗ ಮತ್ತು ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಒಟ್ಟುಗೂಡಿ ಅನೈಕ್ಯತೆಯನ್ನುಂಟುಮಾಡುವ ಶಕ್ತಿಗಳನ್ನು ಸೋಲಿಸಿ ದೇಶವನ್ನು ರಕ್ಷಿಸಬೇಕಾಗಿದೆ.

[ಕೃಪೆ : ಪೀಪಲ್ಸ್ ಡೆಮಾಕ್ರಸಿ, ಡಿಸೆಂಬರ್ 26ರ ಸಂಚಿಕೆ]

○

ಚುನಾವಣೆ ಮುಗಿದರೂ ಸಮಸ್ಯೆಗಳು ಬಗೆಹರಿಯಲಾರವು

–ಎನ್. ಕೆ ಉಪಾಧ್ಯಾಯ

ಈ ಲೇಖನ ಅಚ್ಚಾಗುವಾಗ ಕರ್ನಾಟಕ ರಾಜ್ಯದ ಹಾಗೆಯೇ ಆಂಧ್ರ, ತ್ರಿಪುರಾ ರಾಜ್ಯಗಳ ಚುನಾವಣೆಯ ಫಲಿತಾಂಶದ ಸ್ಪಷ್ಟ ಚಿತ್ರ ಜನರ ಮುಂದಿರುತ್ತದೆ. ತ್ರಿಪುರದ ಫಲಿತಾಂಶದ ಬಗ್ಗೆ ಯಾವ ಸಂಶಯವೂ ಇಲ್ಲ. 5 ವರ್ಷಗಳ ಹಿಂದೆಯೇ ಅಲ್ಲಿಯ ಮತದಾರರು ಇಂದಿರಾ ಕಾಂಗ್ರೆಸ್ಸನ್ನು ಸಂಪೂರ್ಣ ಸೋಲಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಎಡರಂಗ ಸರಕಾರವನ್ನು ಸ್ಥಾಪಿಸಿದ್ದಾರೆ. ಕೇಂದ್ರ ಸರಕಾರ ಮತ್ತು ರಾಜ್ಯದ ಛಿದ್ರಕಾರಿ ಶಕ್ತಿಗಳ ಅಡ್ಡಿ ಆತಂಕಗಳನ್ನೂ ಕುತಂತ್ರಗಳನ್ನೂ ಸಮರ್ಥಕವಾಗಿ ಎದುರಿಸಿ, ಜನಹಿತದ ಹಲವಾರು ಕೆಲಸಗಳನ್ನು ಮಾಡಿ, ಚುನಾವಣೆಯ ಘೋಷಣೆಯನ್ನು ಕಾರ್ಯರೂಪದಲ್ಲಿ ತಂದು ಮತ್ತಷ್ಟು ಜನಪ್ರಿಯವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯನ್ನೂ ಅದರ ಮುಖಂಡತ್ವದಲ್ಲಿರುವ ಎಡರಂಗವನ್ನೂ ಇನ್ನೂ ಹೆಚ್ಚಿನ ಬೆಂಬಲದಿಂದ ತ್ರಿಪುರಾದ ಜನತೆ ಆರಿಸಿ ತರುತ್ತಾರೆಂದು ಯಾರಿಗೂ ಕಿಂಚಿತ್ತೂ ಸಂಶಯವಿಲ್ಲ.

ಆಂಧ್ರದಲ್ಲಿಯೂ ಬಲವಾದ ಪ್ರತಿರೋಧ ಬೆಳೆದಿದೆ. ಕಾಂಗ್ರೆಯೊಳಗಿನ ಆಂತರಿಕ ಜಗಳ, ಎಡ ಮತ್ತು ಜನತಾ, ಲೋಕದಳಗಳ ಸಂಯುಕ್ತ ಹೋರಾಟ, ಸಿನೆಮಾ ನಟ, ಎನ್.ಟಿ.ರಾಮರಾವ್ ಅವರ ಪ್ರಭಾವಗಳಿಂದಾಗಿ ಏಕ ಪಕ್ಷೀಯವಾಗಿ ಕಾಂಗ್ರೆಗೆ ಅಧಿಕಾರ ನಡೆಸುವ ಅವಕಾಶ ಸಿಗಲಿಕ್ಕಿಲ್ಲೆಂಬ ಅಂದಾಜು ಕಾಣುತ್ತಿದೆ.

ಆಂಧ್ರದಂತೆಯೇ ಕರ್ನಾಟಕದ ರಾಜಕೀಯ ಪರಿಸ್ಥಿತಿಗೊಂದಲ ಮಯವಾಗಿದೆ. ಸಿ ಪಿ ಐ. (ಎಂ)ನ ಪ್ರಧಾನ ಕಾರ್ಯದರ್ಶಿಯವರಾದ ಕಾಂ| ಇ. ಎಂ. ಎಸ್. ನಂಬೂದಿರೀಪಾದ್ ಅವರು ಕರ್ನಾಟಕದ ರಾಜ್ಯದ ಐದು ಜಿಲ್ಲೆಗಳಲ್ಲಿ ಹಲವಾರು ಕಡೆ ಭಾಷಣ ಮಾಡಿದ್ದಾರೆ. ಅವರ ಹಾಗೆಯೇ ಇತರ ವಿರೋಧ ಪಕ್ಷಗಳ ಮುಖಂಡರಿಗೆ ಜನತೆ ಹೃತ್ಪೂರ್ವಕ ಬೆಂಬಲ ನೀಡಿದ್ದಾರೆ. ಸಾರ್ವಜನಿಕ ಸಭೆಗಳಲ್ಲಿ ಈ ಮುಂಚಿನಂತೆ ಇಂದಿರಾ ಗಾಂಧಿ ಜನರನ್ನು ಆಕರ್ಷಿಸಲಿಲ್ಲ. ಜನರೂ ಇಂದಿರಾ ಗಾಂಧಿಗಾಗಲೀ ಆಕೆಯ ಒಣ ಆಶ್ವಾಸನೆಗಳಿಗಾಗಲೀ ಮರುಳಾಗುತ್ತಿಲ್ಲ ಎಂಬ ಸಂಗತಿ ಎಲ್ಲರಿಗೂ ಗೊತ್ತಾಗಿದೆ.

ಸ್ವತಃ ರಾಜೀವ ಗಾಂಧಿಯವರೇ ಇಂದಿರಾ ಗಾಂಧಿಯ ಪ್ರಭಾವ ಮೊದಲಿನಷ್ಟು ಉಳಿದಿಲ್ಲೆಂಬುದನ್ನು ಒಪ್ಪಿಕೊಂಡಿದ್ದಾರೆ. ಈ ಮುಂಚೆ ಇಂದಿರಾ ಗಾಂಧಿಯೆಂದರೆ ಪ್ರತ್ಯಕ್ಷ ದೇವರಂತೆ ಕಾಣುತ್ತಿದ್ದ ಜನ, ಈಗ ಆಕೆಯ ಸಭೆಗಳಲ್ಲಿ ಗೊಂದಲವೆಬ್ಬಿಸಿದ ಸಂಗತಿಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ವಿರೋಧ ಪಕ್ಷಗಳ ಮುಖಂಡರಂತೆ ಯಾವ ಕಾಂಗ್ರೆ ಮುಖಂಡನೂ ಸಾರ್ವಜನಿಕ ಸಭೆಗಳಲ್ಲಿ ಜನರನ್ನು ಆಕರ್ಷಿಸಿಲ್ಲ.

1977 ರಿಂದ 79ರವರೆಗೆ ಕೇಂದ್ರದಲ್ಲಿದ್ದ ಜನತಾ ಸರಕಾರವನ್ನು ಬೈಯ್ಯುವುದು, ವಿರೋಧ ಪಕ್ಷಗಳ ಐಕ್ಯತೆಯನ್ನು ಹೀನಾಯಗೊಳಿಸಿ ತೆಗಳುವುದು, ಕೇಂದ್ರದ ನೀತಿಯನ್ನು ಒಪ್ಪಿಕೊಳ್ಳುವ ರಾಜ್ಯ ಸರಕಾರಗಳನ್ನೇ ಆರಿಸಬೇಕೆಂದು ಹೇಳುವುದು, ಪ್ರಾದೇಶಿಕ ಪಕ್ಷಗಳನ್ನು ಬೈಯ್ಯುವುದು— ಇವುಗಳಷ್ಟೇ ಇಂದಿರಾ ಗಾಂಧಿ ಮತ್ತು ಇತರ ಕಾಂಗ್ರೆ ಮುಖಂಡರ ಭಾಷಣಗಳ ಮುಖ್ಯ ವಿಷಯಗಳಾಗಿದ್ದವು. ದೇಶದ ಜನತೆ ಎದುರಿಸುತ್ತಿರುವ ಬೆಲೆಯೇರಿಕೆ, ಭ್ರಷ್ಟಾಚಾರ, ಲಂಚಗುಳಿತನಗಳಕುರಿತು ಇಂದಿರಾ ಗಾಂಧಿಯ ಉತ್ತರವೇನೆಂದರೆ ಇವುಗಳೆಲ್ಲ ಜಗದ್ವ್ಯಾಪಿಯಾಗಿವೆ ಎಂದು. ಜಾತೀಯ ದಂಗೆಗಳು, ಹರಿಜನ–ಗಿರಿಜನರ ಮೇಲಿನ ದಬ್ಬಾಳಿಕೆಗಳು, ಮುಷ್ಕರ–ಲಾಕೌಟುಗಳು, ಉತ್ಪಾದನೆಯಲ್ಲಿ ಹಿಂಜರಿತ, ಅತಿಪ್ರಸರಣಗಳ ಕುರಿತು ಪ್ರಶ್ನಿಸಿದಾಗ, ವಿರೋಧ ಪಕ್ಷದವರೇ ಇವುಗಳಿಗೆಲ್ಲ ಕಾರಣರಾಗಿದ್ದಾರೆ, ದೇಶದ ಪ್ರಗತಿಯನ್ನು ಕುಂಠಿತಗೊಳಿಸುತ್ತಿದ್ದಾರೆಂದೆಲ್ಲ ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ.

1980ರ ಲೋಕಸಭೆಯ ಚುನಾವಣೆಯ ಕಾಲದಲ್ಲಿ ಇಂದಿರಾ ಗಾಂಧಿಯನ್ನು ನಂಬಿದ ಜನ ಈಗ ಆಕೆಯ ಕುರಿತು ನಿಧಾನವಾಗಿ ಭ್ರಮೆ ನಿರಸನರಾಗುತ್ತಿದ್ದಾರೆಂಬ ಚಿತ್ರ ಕಂಡು ಬರುತ್ತಿದೆ. 35 ವರ್ಷಗಳ ಕಾಂಗ್ರೆ ಆಡಳಿತೆಯಲ್ಲಿ ಮೂಲಭೂತವಾಗಿ ಯಾವ ಸಮಸ್ಯೆಯನ್ನೂ ಬಗೆಹರಿಸದೆ, ವಿದೇಶಿ ಹಾಗೂ ದೇಶಿ ಬಂಡವಾಲದಾರರಿಗೆ, ಭೂಮಾಲಕರಿಗೆ, ಕಳ್ಳಸಂತೆಚೋರರಿಗೆ, ಸ್ಮಗ್ಲರ್ರಿಗೆ ಅನುಕೂಲವಾಗುವಂಥ ಆರ್ಥಿಕ ನೀತಿಯನ್ನು ಅನುಸರಿಸುತ್ತಾ, ಗುತ್ತೇದಾರಿ ಬಂಡವಾಲದಾರರ ಬಂಡವಾಲ ಪ್ರತಿವರ್ಷ ಇಮ್ಮಡಿಗೊಳಿಸುತ್ತಾ, ಕಳ್ಳ ವ್ಯಾಪಾರಿಗಳೂ, ಸ್ಮಗ್ಲರರೂ ಜನರ ದೈನಂದಿನ ಜೀವನವನ್ನೇ ಹಾಳುಮಾಡುವಂತೆ ಅವಕಾಶಮಾಡಿಕೊಡುತ್ತಿರುವ ಇಂದಿರಾ ಗಾಂಧಿಯಲ್ಲಿ ಜನರ ನಂಬಿಕೆ ಕಡಿಮೆಯಾಗುತ್ತಿದೆ.

ತನ್ನ ಇಡೀ ಚುನಾವಣಾ ಪ್ರಚಾರದಲ್ಲಿ ಇಂದಿರಾ ಗಾಂಧಿಯವರು ವಿರೋಧ ಪಕ್ಷದವರ ಮೇಲೆ ಬರೀ ವಿಷ ಕಾರಿದರು. ಆ ಪಾಪವನ್ನು ತೊಳೆದುಕೊಳ್ಳುವುದಕ್ಕೊ ಎಂಬಂತೆ, ದೇವಸ್ಥಾನಗಳಿಗೆ ದರ್ಶನವಿತ್ತರು, ಚಿಕ್ಕಮಗಳೂರು ಚುನಾವಣೆಯಲ್ಲಿ ತನ್ನ ಪುನರ್ಜನ್ಮವಾಯಿತೆಂದು ಹೇಳುತ್ತಾ ಹೋದರು. ಏಶಿಯಾಡ್ ಆಟಗಳ ಯಶಸ್ವಿಯನ್ನು ಹೊಗಳುತ್ತಾ ತಾನು ಮತ್ತು ತನ್ನ ಮಗ ರಾಜೀವ ಗಾಂಧಿ ಮಾತ್ರ ರಾಷ್ಟ್ರದ ಸಮಸ್ಯೆಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುವ ಸಾಮರ್ಥ್ಯ ಇದ್ದವರಾಗಿದ್ದಾರೆಂಬುದನ್ನು ಒತ್ತಿ ಹೇಳುತ್ತ ಹೋದರು. ಇಂಥ ಭಾಷಣಗಳಿಂದಾಗಿ ತಮ್ಮ ಪಕ್ಷದ ಸ್ಪರ್ಧಿಗಳ ವಿಶೇಷ ಗುಣಗಳನ್ನಾಗಲೀ, ಕಾರ್ಯದಕ್ಷತೆಯನ್ನಾಗಲೀ ಅಥವಾ ಕರ್ನಾಟಕ ರಾಜ್ಯದ ಗುಂಡೂರಾವ್ ಸರಕಾರದ ಮೂರು ವರ್ಷಗಳ ಸಾಧನೆಗಳನ್ನಾಗಲೀ ಜನರಿಗೆ ತಿಳಿಸಿ ಹೇಳುವ ಉಸಾಬರಿಯನ್ನು ಇಂದಿರಾ ಗಾಂಧಿಯಾಗಲೀ ರಾಜೀವ ಗಾಂಧಿಯಾಗಲೀ ಮಾಡಲಿಲ್ಲ. ಹೀಗಾಗಿ ಈ ಹಿಂದಿನ ಚುನಾವಣೆಗಳಲ್ಲಿ ಗಾಳಿಪಟ ಹಾರಿಸುತ್ತ ಬಂದಂಥ ಗರೀಬಿ ಹಟಾವೊ, 20 ಅಂಶಗಳ ಕಾರ್ಯಕ್ರಮಗಳು ಗಾಳಿಯಲ್ಲೇ ಹಾರಿ ಹೋದವು. ಬರೀ ಪ್ರಾದೇಶಿಕ ಪಕ್ಷ, ವಿರೋಧ ಪಾರ್ಟಿಗಳ ಅವಹೇಳನ ಮಾಡುವುದೊಂದೇ ಉಳಿಯಿತು. ಇಂಥ ಮಾತುಗಳು ಜನರಲ್ಲಿ ಪ್ರಭಾವ ಬೀಳಲಿಲ್ಲ.

ಹಾಗೆಯೇ ಡಿಸೆಂಬರ್ 17ನೇ ತಾರೀಕಿನಿಂದಲೇ ಚುನಾವಣೆಯ ಪ್ರಚಾರ ಪ್ರಾರಂಭಿಸಿದ ಇಂದಿರಾ ಗಾಂಧಿಯವರ ಭಾಷಣದಲ್ಲಿ ಎದ್ದು ಕಾಣುವ ಅಂಶ ಒಂದಿತ್ತು. ಕೇಂದ್ರದಲ್ಲಿ ಹಾಗೆಯೇ ರಾಜ್ಯಗಳಲ್ಲಿಯೂ ಭದ್ರವಾದ ಸರಕಾರಕ್ಕೆ ಮತಹಾಕಬೇಕು ಎಂಬ ವಿನಂತಿ. 1980 ರಿಂದಲೂ ಕಾಂಗ್ರೆ ಆಡಳಿತೆ ನಡೆಸುತ್ತಿರುವ ಪ್ರತಿಯೊಂದು ರಾಜ್ಯದಲ್ಲಿಯೂ, ಮಹಾರಾಷ್ಟ್ರ, ಆಂಧ್ರ, ಬಿಹಾರ, ಗುಜರಾತ್, ಯು.ಪಿ., ಹರಿಯಾಣ ಹೀಗೆ ಎಲ್ಲ ರಾಜ್ಯಗಳಲ್ಲಿಯೂ ಕಾಂಗ್ರೆಯೊಳಗಿನ ಗುಂಪುಗಾರಿಕೆಯಿಂದಾಗಿ ಮುಖ್ಯಮಂತ್ರಿಗಳನ್ನು ಮೇಲಿಂದ ಮೇಲೆ ಬದಲಾವಣೆ ಮಾಡಬೇಕಾಗಿ ಬಂದಿರುವ ಸಂಗತಿಗಳನ್ನು ಕರ್ನಾಟಕ-ಆಂಧ್ರದ ಮತದಾರರು ಮರೆತಿಲ್ಲೆಂಬುದನ್ನು ಇಂದಿರಾ ಗಾಂಧಿಯವರು ತಿಳಿದಂತೆ ಕಂಡು ಬರುವುದಿಲ್ಲ.

ಇಂದಿರಾ ಗಾಂಧಿಯ ಸರ್ವಾಧಿಕಾರಿ, ಬಂಡವಾಳಶಾಹಿ ಪರ, ಪ್ರಜಾಪ್ರಭುತ್ವ, ರೈತ-ಕಾರ್ಮಿಕ ವಿರೋಧಿ ಸರಕಾರವನ್ನು ಕೊನೆಗೊಳಿಸುವ ರಾಜಕೀಯ ಹೋರಾಟವೇ ಇದಾಗಿದೆಯೆಂದು ತಿಳಿದು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ಚುನಾವಣೆಯಲ್ಲಿ ಸ್ಪಷ್ಟ ನಿಲುವನ್ನು ತಾಳಿದೆ ಆ ನಿಲುವಿಗನುಸಾರವೇ ಕಾಂಗ್ರೆ ವಿರೋಧವಾದ ಮತಗಳನ್ನು ಆದಷ್ಟು ಮಟ್ಟಿಗೆ ಕ್ರೋಢೀಕರಿಸಿದರೆ ಮಾತ್ರ ಇಂದಿರಾ ಪಕ್ಷವನ್ನು ಸೋಲಿಸಲು ಸಾಧ್ಯವೆಂದು ತಿಳಿದೇ, ತ್ರಿಪುರಾದಲ್ಲಿ ಸಿ.ಪಿ.ಐ.ಯನ್ನು ಎಡರಂಗದಲ್ಲಿ ಸೇರಿಸಿಕೊಂಡು, ಆಂಧ್ರದಲ್ಲಿ ಎನ್. ಟಿ. ರಾಮರಾವ್ ಅವರ ಜೊತೆಯಲ್ಲೂ ಹೊಂದಾಣಿಕೆಮಾಡಿಕೊಳ್ಳಲು ಸರ್ವ ಪ್ರಯತ್ನ ಮಾಡಿ, ಕೊನೆಗೆ ಜನತಾ, ಸಿ.ಪಿ.ಐ., ಲೋಕದಳಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಕರ್ನಾಟಕದಲ್ಲಿ ಜನತಾ ಪಾರ್ಟಿ, ಕ್ರಾಂತಿರಂಗ, ಸಿ. ಪಿ. ಐ. ಕೂಡ ರಂಗ ರಚಿಸಿ ನೇರಸ್ಪರ್ಧೆ ನಡೆಸುತ್ತಿದೆ. ಬಿ. ಜೆ. ಪಿ. ಯವರು ಮಾತ್ರ ತಮ್ಮ ನಿಲುವಿಗೇ ಅಂಟಿಕೊಂಡು ವಿರೋಧ ಓಟುಗಳನ್ನು ಕ್ರೋಢೀಕರಿಸಲಿಕ್ಕೆ ಆತಂಕ ಒಡ್ಡಿದ್ದಾರೆ. ಕೇರಳದಲ್ಲಿ ಹಲವಾರು ಕಡೆ ಸ್ಪರ್ಧಿಸಿ, ವಿರೋಧ ಮತಗಳನ್ನು ಒಡೆದು ಬರೀ 90 ಸಾವಿರ ಮತದಿಂದ ಇಂದಿರಾ ಪಕ್ಷದ ಗುಂಪು ಆರಿಸಿ ಬರುವಂತೆ ಮಾಡಿ, ಇಂದಿರಾ ಕಾಂಗ್ರೆಸ್ಸನ್ನು ಅಧಿಕಾರದ ಗದ್ದುಗೆಗೆ ಏರಿಸಿದ್ದಾರೆ.

ಕರ್ನಾಟಕದಲ್ಲಿ ಕೂಡ ನಾಲ್ಕು ಪಕ್ಷಗಳ ಒಕ್ಕೂಟದ ಜೊತೆಯಲ್ಲಿ ಹೊಂದಾಣಿಕೆಗೆ ಬಾರದೆ ಇಂದಿರಾ ಕಾಂಗ್ರೆಸ್ಸಿಗೆ ಸಹಾಯ ಮಾಡುವ ಚಿನ್ಹೆಗಳು ಕಂಡು ಬರುತ್ತಿವೆ. ಸೋಮವಾರಪೇಟೆ ಮೊದಲಾದ ಕ್ಷೇತ್ರಗಳಲ್ಲಿ ನೇರವಾಗಿ ಕಾಂಗ್ರೆ ಪ್ರತಿನಿಧಿಗಳಿಗೆ ಪ್ರಚಾರ ಕೂಡ ನಡೆದಿದೆಯೆಂದು ತಿಳಿದು ಬರುತ್ತದೆ.

ಈ ಚುನಾವಣೆಯಲ್ಲಿ ಕಾಂಗ್ರೆ ವಿರೋಧ ಭಾವನೆ ಜನರಲ್ಲಿ ಬೆಳೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಹಿಂದುಳಿದವರಲ್ಲೂ ಅಲ್ಪ ಸಂಖ್ಯಾತರಲ್ಲೂ ಕೂಡ ಹಿಂದಿನ ಇಂದಿರಾ ಭ್ರಮೆ ಉಳಿದಿಲ್ಲ. ಆದ್ದರಿಂದ ಇಂದಿರಾರವರಿಗೂ ಭದ್ರವಾದ ಮತದಾರರ ಬ್ಯಾಂಕು ಎಲ್ಲಿಯೂ ಕಂಡು ಬರುತ್ತಿಲ್ಲ.

ಚುನಾವಣೆಯಲ್ಲಿ ಸರಕಾರದ, ಪೋಲೀಸರ ಸಹಾಯ ಪಡೆದಿರುವುದು ಜನರಲ್ಲಿ ಅಸಹ್ಯ ಭಾವನೆಯನ್ನುಂಟು ಮಾಡಿದೆ.

ಕರ್ನಾಟಕದಲ್ಲಿ ನಾಲ್ಕು ಪಕ್ಷಗಳ ಒಕ್ಕೂಟ ಮತದಾರರಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡಿದೆ. ಚುನಾವಣೆಯಲ್ಲಿ ಎಂಥ ಪರಿಣಾಮ ಹೊರಬೀಳಲಿ, ಒಕ್ಕೂಟ ಮಾತ್ರ ಹೀಗೆಯೇ ಮುಂದುವರಿದು ಜನರ ಚಳುವಳಿಯನ್ನು ಐಕ್ಯತೆಯಿಂದ ನಡೆಸಿಕೊಂಡು ಹೋಗಲು ಸಹಾಯವಾಗಬೇಕು.

1952 ರಿಂದಲೂ ಕರ್ನಾಟಕ ಕಾಂಗ್ರೆಸ್ಸಿನ ಭದ್ರವಾದ ಕೋಟೆಯಾಗಿದೆ. ಪ್ರಜಾಪ್ರಭುತ್ವ ಚಳುವಳಿ ಬಲವಾಗಿ ಬೆಳೆಯದಿರುವುದೇ ಇದಕ್ಕೆ ಮುಖ್ಯ ಕಾರಣ. ರೈತರ–ಕಾರ್ಮಿಕರ ಹಲವಾರು ಹೋರಾಟಗಳು ನಡೆದರೂ ಕೂಡ ರಾಜ್ಯದ ವಿಶಿಷ್ಟ ಪರಿಸ್ಥಿತಿಯಿಂದಾಗಿ, ಜನರ ಭಾವನೆಗಳನ್ನು ಕ್ರೋಢೀಕರಿಸುವ ಶಕ್ತಿ ಕಮ್ಯುನಿಸ್ಟ್ ಪಾರ್ಟಿಗೂ, ಕೆಲವು ವರ್ಷಗಳ ನಂತರ ಕೆಲವು ಪ್ರದೇಶಗಳಲ್ಲಿ ಹುಟ್ಟಿ ಬೆಳೆದ ಸೋಷಲಿಸ್ಟ್ ಪಾರ್ಟಿಗೂ ಸಾಧ್ಯವಾಗಲಿಲ್ಲ. ಆದರೆ 1980 ರಿಂದ ಇತ್ತೀಚೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಸಿ. ಪಿ ಐ., ಜನತಾ, ಕ್ರಾಂತಿರಂಗ, ಅರಸು ಕಾಂಗ್ರೆಸ್ ಮೊದಲಾದ ವಿರೋಧ ಪಕ್ಷಗಳನ್ನೆಲ್ಲ ಸೇರಿಸಿ, ರೈತರ-ಕಾರ್ಮಿಕರ ಹಾಗೂ ಇತರ ಸಾರ್ವಜನಿಕರ ಹಲವಾರು ಹೋರಾಟಗಳನ್ನು ನಡೆಸಿ ಗುಂಡೂರಾವ್ ಸರಕಾರದಲ್ಲಿದ್ದ ಸಿ. ಎಂ. ಇಬ್ರಾಹಿಂ, ರೇಣುಕಾ ರಾಜೇಂದ್ರನ್ ಮಂತ್ರಿಗಳನ್ನು ಭ್ರಷ್ಟಾಚಾರದ ಆರೋಪಕ್ಕಾಗಿ ಚಳುವಳಿ ಹೂಡಿ ಮಂತ್ರಿ ಮಂಡಲದಿಂದ ಕಿತ್ತೊಗೆಯಲಾಯಿತು. ರಾಜ್ಯಾದ್ಯಂತ ರೈತರ, ವಿದ್ಯಾರ್ಥಿಗಳ, ಕಾರ್ಮಿಕರ ಮೇಲೆ ನಡೆದ ದಬ್ಬಾಳಿಕೆ, ಕೊಲೆಯ ವಿರುದ್ಧ ಹೋರಾಟ ನಡೆಸಲಾಯಿತು. ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರಕ್ಕೆ ರಾಜ್ಯಾದಂತ ಆಂದೋಲನ ನಡೆಸಲಾಯಿತು. ಹಾಗೆಯೇ ಕಾರ್ಮಿಕ ಸಂಘಗಳ ರಾಷ್ಟ್ರೀಯ ಹೋರಾಟ ಸಮಿತಿಯ ಕರೆಯ ಮೇರೆಗೆ ರಾಜ್ಯಾದ್ಯಂತ ಧರಣ, ಮುಷ್ಕರ, ಬಂದನ್ನು ಯಶಸ್ವಿಯಾಗಿ ನಡೆಸಲಾಯಿತು.

ಈ ಎಲ್ಲ ಕಾರ್ಯಕ್ರಮಗಳು ಜನರ ಮೇಲೆ ಒಳ್ಳೆ ಪರಿಣಾಮ ಬೀರಿವೆ. ಚುನಾವಣೆಯಲ್ಲಿ ಮತದಾನ ಮಾಡುವಾಗ ಇದು ಪ್ರತಿಬಿಂಬಿಸುತ್ತದೆ.

1952, 57, 62 ಮತ್ತು 72ರ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಶೇ. 50 ರಿಂದ 52ರಷ್ಟು ಮತಬಿದ್ದಿದೆ. 1967 ರಲ್ಲಿ ಕಾಂಗ್ರೆಸ್ಸಿನ ಮತ 48.63ರಷ್ಟು ಕೆಳಗಿಳಿದಿದೆ. 1978ರಲ್ಲಿ ಅದು ಶೇ. 43 ರಷ್ಟಾಯಿತು. ಆ ಚುನಾವಣೆಯಲ್ಲಿ ಜನತಾ ಅತಿ ಪ್ರಭಾವಿತ ವಿರೋಧಿ ಪಕ್ಷವಾಗಿ ಆರಿಸಿ ಬಂತು. 1978ರಲ್ಲಿ 59 ಜನ ಜನತಾ ಪಕ್ಷದಿಂದ ಆರಿಸಿ ಬಂದಿದ್ದರು. ಅವರಿಗೆ ಶೇ 36.9 ರಷ್ಟು ಮತ ಬಿದ್ದಿತ್ತು.

1978ಕ್ಕೂ 1983ಕ್ಕೂ ಬದಲಾವಣೆಯಾಗಿದೆ. 1978ರಲ್ಲಿ ಸಿ ಪಿ ಐ. ಕಾಂಗ್ರೆ ಜೊತೆಯಲ್ಲಿತ್ತು. ಸಿ. ಪಿ. ಐ. (ಎಂ) ಸ್ವತಂತ್ರವಾಗಿಯೇ ಸ್ಪರ್ಧಿಸಿತ್ತು. ಆದರೆ ಈ ಸಲ ಜನತಾ, ಕ್ರಾಂತಿರಂಗ, ಸಿ.ಪಿ ಐ. ಮತ್ತು ಸಿ ಪಿ ಐ. (ಎಂ)ಗಳು ಒಟ್ಟಾಗಿ ಸ್ಪರ್ಧಿಸುವುದರಿಂದ, ಹಲವಾರು ಹೋರಾಟಗಳನ್ನು ಈ ಪಕ್ಷಗಳು ನಡೆಸಿಕೊಂಡು ಬಂದಿರುವುದರಿಂದ, ಜನರಲ್ಲಿ ಗುಂಡೂರಾವ್ ಸರಕಾರದ ವಿರುದ್ಧ ಅಸಮಾಧಾನ ಅತಿಯಾಗಿ ಬೆಳೆದು ಬಂದಿರುವುದರಿಂದ ಈ ಚುನಾವಣೆಯಲ್ಲಿ ಇಂದಿರಾ ಪಕ್ಷ ಬಹುಮತ ಪಡೆಯುವುದು ಕಷ್ಟವಾಗಬಹುದೆಂದು ಕಂಡು ಬರುತ್ತದೆ.

ತನ್ನ ಅಧಿಕಾರ, ಹಣ, ಗುಂಡಾಗಿರಿಗಳ ಪ್ರಭಾವದಿಂದ ಕರ್ನಾಟಕ-ಆಂಧ್ರಗಳಲ್ಲಿ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ಕೂಡ, ಇಂದಿರಾ ಗಾಂಧಿಗೆ ತಲೆನೋವು ತಪ್ಪುವುದಿಲ್ಲ. ಆಂಧ್ರದಲ್ಲಿ ಪ್ರಾದೇಶಿಕವಾದ ಬಲವಾಗಿದೆ. ಯಾರು ಮುಖ್ಯ ಮಂತ್ರಿಯಾದರೂ ಕೂಡ ಈಗಿನ ಕಾಂಗ್ರೆಸ್ ಪಕ್ಷದ ಪರಿಸ್ಥಿತಿಯಲ್ಲಿ ಆಂಧ್ರದಲ್ಲಿ ಬಲಿಷ್ಟವಾದ, ಭದ್ರವಾದ ಕಾಂಗ್ರೆ ಸರಕಾರ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ.

(7ನೇ ಪುಟ ನೋಡಿ)

ಬೆಂಗಳೂರಿನಲ್ಲಿ :

ಕ್ಯಾಪ್‌ಸ್ಟೀಲ್ ಕಾರ್ಮಿಕರ ಪ್ರಚಂಡ ವಿಜಯ

247 ದಿನಗಳ ಧೀರ್ಘ ಹೋರಾಟ ನಡೆಸಿದ ನಂತರ ಬೆಂಗಳೂರು ನಗರ ಹೊರ ವಲಯದ ವೈಟ್ ಫೀಲ್ಡ್ ರಸ್ತೆಯಲ್ಲಿರುವ 'ಕ್ಯಾಪ್‌ಸ್ಟೀಲ್' ಉಕ್ಕು ಕಾರ್ಖಾನೆಯ ಕಾರ್ಮಿಕರು ಅಂತಿಮವಾಗಿ ಪ್ರಚಂಡ ವಿಜಯ ಸಾಧಿಸಿದ್ದಾರೆ.

ಮಾಲೀಕರ ತೀವ್ರ ಶೋಷಣೆ, ದಬ್ಬಾಳಿಕೆಗಳಿಗೆ ಒಳಗಾಗಿದ್ದ 300 ಕ್ಕಿಂತ ಹೆಚ್ಚು ಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ದಿನಾಂಕ 15-4-1982 ರಿಂದ ಹೋರಾಟ ಪ್ರಾರಂಭಿಸಿದ್ದರು. ಇವರಲ್ಲಿ ಕೇವಲ 140 ಮಂದಿ ಮಾತ್ರ ಖಾಯಂ ಕೆಲಸಗಾರರು. ಉಳಿದವರು ಕಾಂಟ್ರ್ಯಾಕ್ಟ್ ಕೆಲಸಗಾರರು. ಈ ಕಾಂಟ್ರ್ಯಾಕ್ಟ್ ಕೆಲಸಗಾರರನ್ನು ಖಾಯಂಗೊಳಿಸಬೇಕೆಂದು ಅನೇಕ ವರ್ಷಗಳಿಂದಲೂ ಕೇಳುತ್ತಾ ಬಂದಿದ್ದರೂ ಕೂಡ ಅದನ್ನು ಮಾಲೀಕ ವರ್ಗ ಗಣನೆಗೇ ತೆಗೆದುಕೊಂಡಿರಲಿಲ್ಲ.

ಸುಮಾರು 3 ವರ್ಷಗಳ ಹಿಂದೆ ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟನೆಗೊಂಡಿದ್ದ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಹೋರಾಡುತ್ತಾ ಬಂದರು.

ಸಂಘದ ಮೇಲೆ ದಬ್ಬಾಳಿಕೆ ಪ್ರಾರಂಭವಾಯಿತು. ಸಂಘದ ಮುಖಂಡರಿಗೆ ಕಿರುಕುಳ ನೀಡಲು ಆರಂಭಿಸಿದರು. ಅದರ ಒಂದು ಭಾಗವಾಗಿ ಕಾರ್ಮಿಕ ಮುಖಂಡರಾಗಿದ್ದ ಎಂ. ಕೆ. ರಾಯ್ ಎಂಬುವರನ್ನು ಮಾಲೀಕರು ಅಕ್ರಮವಾಗಿ ಡಿಸ್‌ಮಿಸ್ ಮಾಡಿದರು. ಈ ಎಲ್ಲಾ ಕಾರಣಗಳಿಂದಾಗಿ ಕಾರ್ಮಿಕರು ಮುಷ್ಕರ ಹೂಡುವುದು ಅನಿವಾರ್ಯವಾಯಿತು.

ಸುಮಾರು 40 ದಿನಗಳ ಕಾಲ ಕಾರ್ಖಾನೆ ನಡೆಯುಲಿಲ್ಲ. ಮುಷ್ಕರ ಸಂಪೂರ್ಣ ಯಶಸ್ವಿಯಾಯಿತು. ನಂತರ ಮುಷ್ಕರವನ್ನು ಮುರಿಯಲು ಸರ್ವ ಪ್ರಯತ್ನ ಮಾಡಿದರು. ಹಲವಾರು ಕಾರ್ಮಿಕ ಮುಖಂಡರ ಮೇಲೆ ಸುಳ್ಳು ಪೋಲೀಸ್ ಕೇಸುಗಳನ್ನು ಹಾಕಿಸಿ ಜೈಲಿಗೆ ಕಳಿಸಿದರು. ಪೋಲೀಸರಿಂದ ಹೊಡೆಸಿದರು, ಗೂಂಡಾಗಳನ್ನು ಬಿಟ್ಟು ಹಲ್ಲೆ ನಡೆಸಿದರು. ಎಷ್ಟೇ ಪ್ರಯತ್ನ ಮಾಡಿದರು 15 ಕಾರ್ಮಿಕರಿಗಿಂತ ಹೆಚ್ಚಾಗಿ ಕಾರ್ಖಾನೆಯೊಳಕ್ಕೆ ಕೊಂಡು ಹೋಗಲು ಮಾಲೀಕರಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಹೊರಗಿನಿಂದ ಹೊಸ ಕಾರ್ಮಿಕರನ್ನು ತಂದು ಪೋಲೀಸ್ ಸಹಾಯದೊಂದಿಗೆ ಕಾರ್ಖಾನೆ ನಡೆಸಲು ಪ್ರಾರಂಭಿಸಿದರು. ಕಾರ್ಮಿಕ ಕಾನೂನಿನಲ್ಲಿ ಹೊಸ ಕೆಲಸಗಾರರನ್ನು ಇಟ್ಟುಕೊಂಡು ಕೆಲಸ ಮಾಡುವ ಹಾಗಿಲ್ಲ. ಈ ಬಗ್ಗೆ ಕಾರ್ಮಿಕ ಇಲಾಖೆಗೆ ದೂರಿತ್ತರೂ ಏನೂ ಪ್ರಯೋಜನವಾಗಲಿಲ್ಲ. ಕಾರ್ಮಿಕರು ಧೈರ್ಯಗೆಡದೆ ಮುಷ್ಕರ ಮುಂದುವರಿಸಿದರು. ಆದರೆ ಗುಂಡೂರಾವ್ ಸರ್ಕಾರ 11-6-82 ರಂದು ಮುಷ್ಕರವನ್ನು ರದ್ದು ಮಾಡಿ ಒಂದು ಆಜ್ಞೆ ಹೊರಡಿಸಿತು.

ಮುಷ್ಕರವನ್ನು ರದ್ದು ಮಾಡಿದ ಮೇಲೆ ಮುಂದುವರಿಸುವುದು ಕಾನೂನು ಬಾಹಿರವಾದುದರಿಂದ 6-6-82 ರಿಂದ ಕಾರ್ಮಿಕರು ಕೆಲಸಕ್ಕೆ ವಾಪಸಾಗಬೇಕೆಂದು ಸಂಘವು ತೀರ್ಮಾನಿಸಿತು. ಆದರೆ ಕಾರ್ಮಿಕರು ಕೆಲಸಕ್ಕೆ ಹೋದಾಗ ಮಾಲೀಕರು ಒಳಕ್ಕೆ ಬಿಡಲಿಲ್ಲ. ಎಲ್ಲಾ ಕಾರ್ಮಿಕರೂ ಸಂಘಕ್ಕೆ ರಾಜೀನಾಮೆ ನೀಡಿದರೆ ಕಾರ್ಮಿಕರನ್ನು ಒಳಕ್ಕೆ ಬಿಡಲಾಗುವುದೆಂದು ಷರತ್ತು ಹಾಕಲಾಯಿತು. ಕಾರ್ಮಿಕರು ಇದನ್ನು ಒಪ್ಪಲಿಲ್ಲ. ಕಾರ್ಮಿಕ ಇಲಾಖೆಗೆ ದೂರಿತ್ತರೂ ಪ್ರಯೋಜನವಾಗಲಿಲ್ಲ. ಕೊನೆಗೆ ಸಾಕಷ್ಟು ಒತ್ತಡಗಳ ನಂತರ 30-7-82 ರಂದು ಸರ್ಕಾರ ಲಾಕೌಟ್ ರದ್ದು ಮಾಡಿ ಆಜ್ಞೆ ಹೊರಡಿಸಿತು.

ಆದರೆ ಮಾಲೀಕ ಪುನಃ ಕಾರ್ಮಿಕರನ್ನು ಒಳಕ್ಕೆ ಬಿಡಲು ಒಪ್ಪಲಿಲ್ಲ. ಈ ನಡುವೆ ಸುಮಾರು 17 ಕಾರ್ಮಿಕ ಸಂಘದ ಕಾರ್ಯಕರ್ತರನ್ನು ಯಾವ ವಿಚಾರಣೆಯೂ ಇಲ್ಲದೆ ವಜಾ ಮಾಡಲಾಯಿತು. ನಾಲ್ಕಾರು ತಿಂಗಳುಗಳ ಕಾಲ ಸಂಬಳವಿಲ್ಲದೆ ಮನೆಯಲ್ಲಿ ಹೆಂಗಸರು ಮಕ್ಕಳು ಉಪವಾಸ ಬೀಳಬೇಕಾಯಿತು. ಸಿ.ಐ.ಟಿ.ಯು. ಸಂಘಗಳ ನೇತೃತ್ವದ ಇತರ ಕಾರ್ಮಿಕರಿಂದ ಪಡೆಯುತ್ತಿದ್ದ ಅಲ್ಪ ಸ್ವಲ್ಪ ಸಹಾಯಗಳು ಮೀಟಿಂಗ್ ನಡೆಸುವುದಕ್ಕೆ, ಪೋಲೀಸ್ ಕೇಸ್ ನಡೆಸಲು ಕೋರ್ಟ್‌ಗಳಿಗೆ ತಗಲುವ ಖರ್ಚುಗಳಿಗೆ ಸರಿಹೋಗುತ್ತಿತ್ತು. ಹೀಗಾಗಿ ಕಾರ್ಮಿಕರ ಪರಿಸ್ಥಿತಿ ದಿನೇ ದಿನೇ ಹದಗೆಟ್ಟಿತು. ಆದರೂ ಇತರ ಕಾರ್ಮಿಕರ ಸ್ಫೂರ್ತಿ ಇವರನ್ನು ಬೆಂಬಲಿಸಿತು.

ಈ ಮಧ್ಯೆ ಮಾಲೀಕರು ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಅದಕ್ಕೆ ವಿರುದ್ಧವಾಗಿ ಸರ್ಕಾರ ಘೋಷಿಸಿದ್ದ ಬೀಗ ಮುದ್ರೆ ರದ್ದಿನ ಆಜ್ಞೆಯ ವಿರುದ್ಧ ಕರ್ನಾಟಕ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿ ಸ್ಟೇ ಆರ್ಡರ್ ತಂದರು. ಆದರೂ ಕಾರ್ಮಿಕ ಮುಖಂಡರು ಹಿಂಜರಿಯಲಿಲ್ಲ. 2? 8-82 ರಂದು ಹೈಕೋರ್ಟಿಗೆ ಬಂದು ತಮ್ಮ ಹೇಳಿಕೆ ನೀಡಬೇಕೆಂದು ಕಾರ್ಮಿಕ ಸಂಘಕ್ಕೆ ಹೈಕೋರ್ಟ್‌ನಿಂದ ಆದೇಶ ಬಂದಿತು. ಈ ಸಂಧರ್ಭದಲ್ಲಿ ಕಾರ್ಮಿಕರ ಹಿತೈಷಿಯಾಗಿದ್ದ ಒಬ್ಬ ಸೀನಿಯರ್ ವಕೀಲರು ಕಾರ್ಮಿಕರ ನೆರವಿಗೆ ಬಂದರು. ಇದು ಕಾರ್ಮಿಕರಲ್ಲಿ ಉತ್ಸಾಹ ತುಂಬಿತು.

ದಿನಾಂಕ 20-8-82 ರಂದು ಹೈಕೋರ್ಟು ಒಂದು ಆಜ್ಞೆ ನೀಡಿ ಕಾರ್ಮಿಕರನ್ನು ಕಾರ್ಖಾನೆಯ ಒಳಕ್ಕೆ ಬಿಡುವುದು ಮಾಲೀಕರ ಇಚ್ಛೆಗೆ ಒಳಪಟ್ಟಿದೆ. ಇದು ಮಾಲೀಕರು ಮತ್ತು ಕಾರ್ಮಿಕರಿಗೆ ಸಂಬಂಧಿಸಿದ ವಿಷಯ. ಕಾರ್ಮಿಕರು ಬೇಕಾದರೆ ಈ ವಿಷಯವನ್ನು ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ನಲ್ಲಿ ವಾದಿಸಬಹುದು ಎಂದು ಹೇಳಿ ಮಾಲೀಕರ ರಿಟ್ ಪೆಟಿಷನ್ ಅನ್ನು ಡಿಸ್‌ಮಿಸ್ ಮಾಡಿತು.

ನಂತರ ಮುಷ್ಕರ ಮತ್ತು ಲಾಕೌಟ್‌ಗಳಿಗೆ ಸಂಬಂಧಿಸಿದ ಎರಡು ಕೇಸುಗಳನ್ನು ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ನಲ್ಲಿ ಅಡ್ಮಿಟ್ ಮಾಡಿಸಲಾಯಿತು. ಸಂಘದ ಅಧ್ಯಕ್ಷರು ಮತ್ತು ಇನ್ನೋರ್ವ ಸಿ.ಐ.ಟಿ.ಯು. ಮುಖಂಡರು ಸ್ವತಃ ಕೇಸನ್ನು ನಡೆಸಲು ಪ್ರಾರಂಭಿಸಿದರು.

ಒಂದೊಂದು ದಿನವೂ ಒಂದೊಂದು ವರ್ಷವೇನೋ ಎಂಬಂತೆ ದಿನ ಕಳೆಯುತ್ತಾ ಕಾರ್ಮಿಕರು ಮಾನಸಿಕ ಉದ್ವೇಗಕ್ಕೊಳಗಾಗಿದ್ದರು.

ಕೋರ್ಟು ತೀರ್ಪು ಹೊರಬೀಳುವುದನ್ನೇ ಅತ್ಯಂತ ಕಾತುರದಿಂದ ಎದುರು ನೋಡುತ್ತಿದ್ದರು. ಆದರೆ ಕಾರ್ಮಿಕರ ಸಹನೆಯನ್ನು ಪರೀಕ್ಷಿಸುವುದಕ್ಕೋ ಎಂಬಂತೆ ತೀರ್ಪು ನ್ಯಾಯಾಲಯದಲ್ಲಿ ಘೋಷಿತವಾಗದೆ, ತೀರ್ಪನ್ನು ಬರಹದ ಮೂಲಕ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಅದನ್ನು ಕರ್ನಾಟಕದ ಗೆಜೆಟ್‌ನಲ್ಲಿ ಪ್ರಕಟಿಸಬೇಕೆಂದು ಅಧಿಕಾರಿಗೆ ಸಲಹೆ ನೀಡಲಾಗಿತ್ತು. ಗೆಜೆಟ್‌ಗಾಗಿ ಕಾರ್ಮಿಕರು ಕಾದು ಕುಳಿತರು.

ಕೊನೆಗೊಂದು ದಿನ 2-12-1982 ರಂದು ಪ್ರಕಟವಾದ ಗೆಜೆಟ್ 13-12-1982 ರಂದು ಕಾರ್ಮಿಕರ ಕೈ ಸೇರಿದಾಗ ಅದರಲ್ಲಿ ಕ್ಯಾಪ್‌ಸ್ಟೀಲ್ ಕಾರ್ಮಿಕರು ಜಯಗಳಿಸಿದ ಅತ್ಯಂತ ಸಂತಸಕರ ಸುದ್ದಿಯಿತ್ತು.

ಸುದ್ದಿಯನ್ನು ಕಾರ್ಮಿಕರ ಬಳಿ ಓದಿ ತಿಳಿಸಿದಾಗ ಕಾರ್ಮಿಕರು ರೋಮಾಂಚನಗೊಂಡರು. ಇನ್‌ಕ್ವಿಲಾಬ್ ಜಿಂದಾಬಾದ್, ಸಿ.ಐ.ಟಿ.ಯು. ಜಿಂದಾಬಾದ್ ಎಂಬ ಘೋಷಣೆಗಳು ಗಟ್ಟಿಯಾಗಿ ಮೊಳಗಿದವು.

ಂ

ವಿಮಾ ನೌಕರರ ಸಮ್ಮೇಳನ :

ಪಾಲಿಸಿದಾರರ ತೊಂದರೆಗೆ ನೌಕರರು ಕಾರಣರಲ್ಲ

ಜೀವ ವಿಮೆ ಇಳಿಸಿದ ಪಾಲಿಸಿದಾರರಿಗೆ ಸಿಗುವ ಪ್ರತಿಫಲ ತೀರಾ ಕಡಿಮೆಯಾಗಿರಲು ಎಲ್. ಐ. ಸಿ. ನೌಕರರ ಹೆಚ್ಚು ವೇತನವೇ ಕಾರಣ ಎಂಬ ಭಾವನೆಯನ್ನು ದೇಶಾದ್ಯಂತ ಹರಡಲು ಕೇಂದ್ರ ಸರಕಾರ ಸತತ ಪ್ರಯತ್ನ ನಡೆಸುತ್ತಿದೆ. ಆದರೆ ಇದು ನಿಜವಾದ ಕಾರಣಗಳನ್ನು ಅಡಗಿಸಿಟ್ಟು ಕೇಂದ್ರ ಸರಕಾರದ ತಪ್ಪು ನೀತಿಯನ್ನು ಮರೆಮಾಡಿ ನೌಕರರ ಮೇಲೆ ಗೂಬೆ ಕೂರಿಸುವ ಪ್ರಯತ್ನ ಎಂದು ಬೆಂಗಳೂರಿನಲ್ಲಿ ಡಿಸೆಂಬರ್ 27 ರಿಂದ 31ರ ವರೆಗೆ ಜರುಗಿದ ಅಖಿಲ ಭಾರತ ವಿಮಾ ನೌಕರರ ಸಂಘ ತನ್ನ ಹನ್ನೊಂದನೇ ಮಹಾ ಸಮ್ಮೇಳನದ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದೆ.

ಬ್ಯಾಂಕ್ ಠೇವಣಿ, ಯುನಿಟ್ ಟ್ರಸ್ಟ್, ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್ ಇತ್ಯಾದಿ ಉಳಿತಾಯದ ಇತರ ವಿಧಾನಗಳೊಂದಿಗೆ ಹೋಲಿಸಿದರೆ ಜೀವ ವಿಮೆ ಉಳಿತಾಯದ ಒಂದು ಸಾಧನವಾಗಿ ಉಳಿದವುಗಳಿಗಿಂತ ಈಗ ಕೆಳಮಟ್ಟದಲ್ಲಿದೆಯೆಂಬುದು ನಿಜ. ಆದರೆ ಇದಕ್ಕೆ ನಿಜವಾದ ಕಾರಣ ಎಲ್.ಐ.ಸಿ.ಯ ಬಗ್ಗೆ ಕೇಂದ್ರ ಸರಕಾರ ತಳೆದಿರುವ ಧೋರಣೆಗಳೇ ಹೊರತು ಬೇರೇನೂ ಅಲ್ಲ.

ಎಲ್.ಐ.ಸಿ. ತನ್ನ ಧನ ಸಂಗ್ರಹದ ಅರ್ಧದಷ್ಟನ್ನು ಅತೀ ಕಡಿಮೆ ಪ್ರತಿಫಲ ತರುವ ಸರಕಾರೀ ಸೆಕ್ಯೂರಿಟಿಗಳಲ್ಲಿ ತೊಡಗಿಸಬೇಕಾದದ್ದು ಕಾನೂನು ರಿತ್ಯಾ ಅನಿವಾರ್ಯ. ಈ ರೀತಿ ಎಲ್.ಐ.ಸಿ.ಯ 500 ಕೋಟಿ ರೂ. ಇನ್ನು ಇಪ್ಪತ್ತು ವರ್ಷಗಳ ನಂತರವಷ್ಟೇ ಮರಳಿ ಪಡೆಯಲು ಸಾಧ್ಯ. ಇದಕ್ಕೆ ದೊರೆಯುವ ಬಡ್ಡಿ ದರ ಕೇವಲ 4 ರಿಂದ 5.75 ಶೇಕಡಾ. ಆದರೆ ಬ್ಯಾಂಕುಗಳಿಗೆ 5 ವರ್ಷಗಳ ಮೇಲಿನ ಠೇವಣಿಗಳಿಗೆ 11 ಶೇಕಡಾಕ್ಕಿಂತಲೂ ಹೆಚ್ಚು ಲಾಭ ಬಡ್ಡಿದರ ಗಳಿಸಲು ಅವಕಾಶ ನೀಡಲಾಗಿದೆ. ಇದರಿಂದಾಗಿಯೇ ಜೀವ ವಿಮೆಯ ಪಾಲಿಸಿದಾರರಿಗೆ ಯೋಗ್ಯ ದರವನ್ನು ಕೊಡದೆ ಕೇಂದ್ರ ಸರಕಾರ ಅವರನ್ನು ವಂಚಿಸುತ್ತಿದೆ. ಸಧ್ಯದ ಬ್ಯಾಂಕ್ ದರ 10 ಶೇಕಡಾವಿದ್ದರೆ ತನ್ನ ಒಟ್ಟು ಧನ ಸಂಗ್ರಹ ಅರ್ಧದಷ್ಟು ಅಂದರೆ 3605 ಕೋಟಿ ರೂಗಳ ಮೇಲೆ ಎಲ್.ಐ.ಸಿ.ಗೆ ದೊರೆತಿರುವುದು ಕೇವಲ 8.05 ಶೇಕಡಾ ಬಡ್ಡಿ. ಈ ಅಂತರದಿಂದಾಗಿಯೇ ಪಾಲಿಸಿದಾರರಿಗೆ ಹೆಚ್ಚಿನ ಬೋನಸ್ಸು ಕೊಡಲಾಗಲೀ, ಪಾಲಿಸಿಗಳ ಪ್ರೀಮಿಯಂ ದರ ಕಡಿಮೆಮಾಡುವುದಾಗಲೀ ಎಲ್.ಐ.ಸಿ.ಗೆ ಸಾಧ್ಯವಾಗಲಿಲ್ಲ. ಅಂದರೆ ಪಾಲಿಸಿದಾರರಿಗೆ ತಮ್ಮ ಹಣಕ್ಕೆ ಯೋಗ್ಯ ಪ್ರತಿಫಲ ದೊರೆಯದಿರಲು ಕೇಂದ್ರ ಸರಕಾರ ಎಲ್.ಐ.ಸಿ.ಯ ಹಣ ತೊಡಗಿಸುವಿಕೆಯ ಬಗ್ಗೆ ತಳೆದ ಧೋರಣೆಗಳೇ ಕಾರಣ ಎಂಬುದು ಸ್ಪಷ್ಟ. ಆದ್ದರಿಂದಲೇ "ಆಡಳಿತ ಸುಧಾರಣಾ ಆಯೋಗ" ಬಹಳ

(7ನೇ ಪುಟ ನೋಡಿ)

ಡಾ|| ಕಮಲಾರಾಮನ್ ನರ್ಸಿಂಗ್ ಹೋಂ ನೌಕರರ ಹೋರಾಟ

ಸಿ.ಐ.ಟಿ.ಯು. ನೇತೃತ್ವದಲ್ಲಿರುವ ಮೈಸೂರು ಸಿಟಿ ಪ್ರೈವೇಟ್ ನರ್ಸಿಂಗ್ ಹೋಂ ಮತ್ತು ಹಾಸ್ಪಿಟಲ್ ಎಂಪ್ಲಾಯೀಸ್ ಯೂನಿಯನ್ ನೌಕರರು ಬೇಡಿಕೆಗಳಿರುವ ಕಪ್ಪು ಬ್ಯಾಡ್ಜ್‌ಗಳನ್ನು ಧರಿಸಿ ಕೆಲಸ ಮಾಡುವ ಮೂಲಕ ಡಾ|| ಕಮಲಾರಾಮನ್‌ರ ಶೋಷಣೆಯ ವಿರುದ್ಧ ಚಳುವಳಿಯನ್ನು ಸಾರಿದ್ದಾರೆ.

ಮೈಸೂರಿನಲ್ಲಿರುವ ಡಾ|| ಕಮಲಾರಾಮನ್‌ರ ನರ್ಸಿಂಗ್ ಹೋಂ ಮತ್ತು ಹಾಸ್ಪಿಟಲ್‌ನಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ತಿಂಗಳಿಗೆ ಕೇವಲ 30 ರೂ. ಸಂಬಳಕೊಡಲಾಗುತ್ತಿದೆಯಲ್ಲದೆ ಕೊಟ್ಟ ದುಡ್ಡನ್ನೂ ದಂಡದ ರೂಪದಲ್ಲಿ ಮರಳಿ ಪಡೆಯುವ ಕುತಂತ್ರವೂ ನಡೆದೇ ಇದೆ. ಹದಿನೈದು ವರ್ಷಗಳಿಂದಲೂ ದುಡಿದು ಧೂಳಾಗಿ ಹೋಗುತ್ತಿದ್ದರೂ, ತಮ್ಮದೇ ಶ್ರೀಮಂತಿಕೆಯ ಅಮಲಿನಲ್ಲಿರುವ ಡಾಕ್ಟರುರು ಇವರತ್ತ ಕಡೆಗಣ್ಣೂ ಹಾಯಿಸದಾಗಿದ್ದಾರೆ.

ನೌಕರರು ವೇತನ ಏರಿಕೆ; ವಸತಿ ಭತ್ಯ, ಸಮವಸ್ತ್ರ ಮತ್ತಿತರ ನ್ಯಾಯಯುತ ಬೇಡಿಕೆಗಾಗಿ ಹೋರಾಟ ನಡೆಸಿದ್ದಾರೆ. ಸಂಘಟಿತರಾದ ನೌಕರರನ್ನು ಕೆಲಸದಿಂದ ತೆಗೆಯುವ ಬೆದರಿಕೆಯನ್ನು ಡಾ|| ಕಮಲಾರಾಮನ್‌ರವರು ಹಾಕಿದ್ದಾರೆ.

ಬಡ ರೋಗಿಗಳ ರಕ್ತವನ್ನು ನುಂಗುವುದರ ಜೊತೆಗೆ ತಮ್ಮ ನೌಕರರ ನೆತ್ತರವನ್ನೂ ಬಯಸುವ ಈ ಡಾಕ್ಟರ್ ಈಗ ತಾನು ಶಾಸಕಿಯಾಗಿ ಜನಸೇವೆಯನ್ನು ಮಾಡಲು ಮತವನ್ನು ಕೇಳುತ್ತಿದ್ದಾರೆ. ಇಂಥ ವ್ಯಾಘ್ರಗಳು ಶಾಸಕಿಯರಾಗಬೇಕೆ ಜನತೆಯೇ ಯೋಚಿಸಬೇಕು. ತಾವು ನಡೆಸಿರುವ ಹೋರಾಟಕ್ಕೆ ಜನತೆಯ, ಉಳಿದ ಸಂಘಟನೆಗಳ ಬೆಂಬಲವನ್ನು ನೌಕರ ವರ್ಗವು ಕೋರಿದೆ.

ಂ

ಅಗತ್ಯಸೇವಾ ನಿರ್ವಹಣಾ ಕಾನೂನನ್ನು ಪುನರ್ವಿಮರ್ಶಿಸಲು ಭಾರತ ಸರಕಾರಕ್ಕೆ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಕರೆ

—ಆರ್. ಚಂದ್ರ

ಅಗತ್ಯ ಸೇವಾ ನಿರ್ವಹಣಾ ಕಾನೂನನ್ನು (ಇ.ಎಸ್.ಎಂ.ಎ.) ಪುನರ್ವಿಮರ್ಶಿಸಲು ಭಾರತ ಸರಕಾರಕ್ಕೆ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು (ಐ.ಎಲ್.ಓ) ಕರೆ ಕೊಟ್ಟಿದೆ ಎಂದು ನವದೆಹಲಿಯ ಯು.ಎನ್.ಐ ಬಾತ್ಮೀದಾರರಿಂದ ತಿಳಿದು ಬಂದಿದೆ. (ಇಂಡಿಯನ್ ಎಕ್ಸ್‌ಪ್ರೆಸ್ : 17-12-82) ಈ ಕಾನೂನಿನಲ್ಲಿ ಮುಷ್ಕರಗಳನ್ನು ನಿಶೇಧಿಸಿರುವ ಕೈಗಾರಿಕೆಗಳ-ಸೇವಾ ಸಂಸ್ಥೆಗಳ ಸಂಖ್ಯೆಯನ್ನು ಕಡಿಮೆ ಮಾಡಲು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಬಯಸಿದೆ.

ಅಖಿಲ ಭಾರತ ಮಟ್ಟದ ಎರಡು ಕಾರ್ಮಿಕ ಸಂಘಗಳು, ಎ.ಐ.ಟಿ.ಯು.ಸಿ, ಸಿ.ಐ.ಟಿ.ಯು., ಐ.ಎನ್.ಟಿ.ಯು.ಸಿ. (ದಾರಾತಂಡ) ಎಚ್.ಎಂ.ಎಸ್., ಯು.ಟಿ.ಯು.ಸಿ, (ಲೆನಿನ್ ಸರಣಿ) ಮತ್ತು ಟಿ.ಯು.ಸಿ.ಸಿ., ಅಗತ್ಯ ಸೇವಾ ನಿರ್ವಹಣಾ ಕಾನೂನು ದೇಶದ ಕಾರ್ಮಿಕರ ಹಕ್ಕು ಭಾದ್ಯತೆಗಳನ್ನು ತೀವ್ರವಾಗಿ ಉಲ್ಲಂಘಿಸಿರುವುದಾಗಿ ಈ ಮೊದಲು ಜಂಟಿಯಾಗಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಗೆ ದೂರಿಕೊಂಡಿವೆ. ಈ ದೂರನ್ನು ಪರಿಶೀಲಿಸಿದ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಮಿತಿಯು, ಮುಷ್ಕರಗಳನ್ನು ನಿಶೇಧಿಸುವ ಈ ಕಾನೂನಿನ ಉದ್ದೇಶವು ಅಗತ್ಯ ಸೇವಾ ನಿರ್ವಹಣೆಯ ವ್ಯಾಪ್ತಿಗೆ ಮೀರಿರುವುದಾಗಿಯೂ ಸರ್ವಸಾಮಾನ್ಯ ದೇಶದ ಎಲ್ಲಾ ಸೇವಾ ಸಂಸ್ಥೆಗಳಲ್ಲಿಯೂ, ಕೈಗಾರಿಕೆಗಳಲ್ಲಿಯೂ ಮುಷ್ಕರಗಳನ್ನು ನಿಶೇಧಿಸಲು ಉದ್ದೇಶಿಸಿರುವುದಾಗಿಯೂ ಅಭಿಪ್ರಾಯಪಟ್ಟಿದೆ.

ಕಾರ್ಮಿಕರ ಮುಷ್ಕರಗಳಿಂದ ಇಡೀ ದೇಶದ ಜನಜೀವನಕ್ಕೆ ಅಪಾಯ ಸಂಭವಿಸಬಹುದಾದ ಕೆಲವು ನಾಗರಿಕ ಸೇವೆಗಳನ್ನು ಮಾತ್ರ ಅಗತ್ಯ ಸೇವೆಗಳೆಂದು ಪರಿಗಣಿಸಿ, ಅಲ್ಲಿ ಮುಷ್ಕರಗಳನ್ನು ಸೀಮಿತಗೊಳಿಸುವ ಅಥವಾ ವಿರೋಧಿಸುವ ಕಾನೂನನ್ನು ಮಾಡಬಹುದೆಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಅಭಿಪ್ರಾಯಪಡುತ್ತದೆ. ಆದರೆ, ಅಗತ್ಯ ಸೇವೆಗಳ ನಿರ್ವಹಣೆಯ ನೆಪದಲ್ಲಿ ಎಲ್ಲಾ ಸೇವಾ ಸಂಸ್ಥೆಗಳಲ್ಲಿ ಕೈಗಾರಿಕೆಗಳಲ್ಲಿ ಮುಷ್ಕರಗಳನ್ನು ನಿಶೇಧಿಸುವುದಕ್ಕೆ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿದೆ.

ಸಾರ್ವಜನಿಕ ಕ್ಷೇತ್ರದ ಹಲವಾರು ಸಂಸ್ಥೆಗಳಲ್ಲಿ ಈ ಹಿಂದೆ ಮಾನ್ಯತೆ ಪಡೆದ ಕಾರ್ಮಿಕ ಸಂಘಗಳಿಗೆ ಪುನಃ ಮಾನ್ಯತೆ ನೀಡದಿರುವ ದೂರನ್ನೂ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಮಿತಿಯು ಪರಿಶೀಲಿಸಿದೆ. ಈ ಕ್ಷೇತ್ರದಲ್ಲಿ ಹಾರ್ದಿಕ ಕೈಗಾರಿಕಾ ಸಂಬಂಧ ಅಭಿವೃದ್ಧಿಗೊಳ್ಳುವಂತೆ ಪ್ರೋತ್ಸಾಹಿಸಲು ಭಾರತ ಸರಕಾರ ಸೂಕ್ತ ಕ್ರಮ ಕೈಕೊಳ್ಳುವುದೆಂದು ಸಮಿತಿ ಹಾರೈಸಿದೆ. ಕೈಗಾರಿಕೆಗಳಲ್ಲಿ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವುದು ಇನ್ನೂ ಕಡ್ಡಾಯದಾಗಿರದೆ, ಐಚ್ಛಿಕವಾಗಿರುವುದರಿಂದ ಸಮಿತಿಯು ಈ ವಿಷಯದಲ್ಲಿ ಏನೂ ಮಾಡಲಾರದು.

ದೇಶದ ಅತ್ಯಂತ ದೊಡ್ಡ ಉದ್ಯೋಗಪತಿ ಸರಕಾರವೇ ಆಗಿದ್ದರೂ, ಸರಕಾರಿ ಕ್ಷೇತ್ರದಲ್ಲಿರುವ ಸಂಘಗಳೊಡನೆ ಮಾಡಿಕೊಂಡ ಸಾಮೂಹಿಕ ಒಪ್ಪಂದಗಳನ್ನು ಗೌರವಿಸದೆ ಅವುಗಳ ಕೆಲವು ಅಂಶಗಳನ್ನು ಸಂಬಂಧಪಟ್ಟ ಕಾರ್ಮಿಕ ಸಂಘಗಳ ಅನುಮತಿ ಇಲ್ಲದೆ ಏಕಪಕ್ಷೀಯವಾಗಿ ಸರಕಾರವೇ ಬದಲಾಯಿಸುತ್ತಿದೆ ಎಂದು ದೂರಲಾಗಿದೆ. ಉದಾ: ರೈಲ್ವೆ ಬೋರ್ಡ್ 10 ಗಂಟೆ ಕೆಲಸದ ಅವಧಿಯ ಒಪ್ಪಂದವನ್ನು ಕಾರ್ಯಗತಗೊಳಿಸದಿರುವುದು; ಸಾಮಾನ್ಯ ವಿಮಾ ನೌಕರರ ಸೇವಾ ನಿಯಮಗಳನ್ನು ಸರಕಾರ ಏಕಪಕ್ಷೀಯವಾಗಿ ಗೆಜೆಟ್ ಪ್ರಕಟಣೆಯ ಮೂಲಕ ಬದಲಾಯಿಸಿರುವುದು; ಜೀವವಿಮಾ ನೌಕರರ ಬೋನಸ್ ಮತ್ತು ತುಟ್ಟಿಭತ್ತೆ ಕಡಿತಗೊಳಿಸಲು ಸಂಸತ್ತಿನಲ್ಲಿ ಕಾನೂನು ಜ್ಯಾರಿಗೊಳಿಸಿರುವುದು, ಇತ್ಯಾದಿ.

ಕಾರ್ಮಿಕ ಸಂಘಗಳೊಡನೆ ಮಾಡಿಕೊಂಡ ಒಪ್ಪಂದಗಳನ್ನು ಗೌರವಿಸದೇ ಇರುವುದು, ಆ ಒಪ್ಪಂದಗಳ ಕೆಲವು ಅಂಶಗಳನ್ನು ಆಡಳಿತ ನಿರ್ದೇಶಕರುಗಳಿಂದ ಹಾಗೂ ಸಂಸತ್ತಿನ ಕಾನೂನುಗಳಿಂದ ಏಕಪಕ್ಷೀಯವಾಗಿ ಸರಕಾರವು ತಿದ್ದುಪಡಿ ಮಾಡುತ್ತಿರುವುದು ಕಾರ್ಮಿಕ ಸಂಘಗಳ ಸಾಮೂಹಿಕ ಚೌಕಾಸಿಯ ಹಕ್ಕುಗಳನ್ನು ಉಲ್ಲಂಘಿಸಿದಂತಾಗುವುದೆಂದು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಮಿತಿಯು ಅಭಿಪ್ರಾಯಪಟ್ಟಿದೆ. ಭಾರತ ಸರಕಾರವು ಇನ್ನು ಮುಂದೆಯಾದರೂ ಇಂತಹ ಉಲ್ಲಂಘನೆಗಳನ್ನು ಮಾಡದಿರಲಿ ಎಂದು ಹಾರೈಸಿದೆ.

ಜನವರಿ 19, 1982ರ ರಾಷ್ಟ್ರವ್ಯಾಪಿ ಮುಷ್ಕರದಲ್ಲಿ ಭಾಗವಹಿಸಿದ ನೌಕರರ ವಿರುದ್ಧ ಕಠಿಣ ಶಿಸ್ತುಕ್ರಮ ಕೈಕೊಂಡಿರುವುದು, ಅವರನ್ನು ಭಾರೀ ಸಂಖ್ಯೆಯಲ್ಲಿ ಕೆಲಸದಿಂದ ಕಿತ್ತು ಹಾಕಿರುವುದು, ಅವರ ಸಂಘಗಳ ಧುರೀಣರನ್ನು ಶಿಕ್ಷೆಗೊಳಪಡಿಸಿರುವುದು, ಅವರ ಸಂಘಗಳ ಮಾನ್ಯತೆಯನ್ನು ರದ್ದುಗೊಳಿಸಿರುವುದು, ಇತ್ಯಾದಿ ದಮನಕಾರಿ ಕ್ರಮಗಳು ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯಕ್ಕೆ ತೀವ್ರ ಅಪಾಯವಾಗಿವೆ ಎಂದು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಮಿತಿ ಅಭಿಪ್ರಾಯಪಟ್ಟಿದೆ.

ಇಂದಿರಾ ಸರಕಾರ ಡಿಸೆಂಬರ್ 1981ರ ಪೂರ್ವದಲ್ಲಿ ಒಂದೂವರೆ ವರ್ಷಗಳಿಂದ ಕಾರ್ಮಿಕ ಹಕ್ಕುಗಳನ್ನು ಉಲ್ಲಂಘಿಸುತ್ತಿದ್ದುದನ್ನು. ಅಂತರ ರಾಷ್ಟ್ರೀಯ ಭದ್ರತಾ ಕಾನೂನು (ಎನ್. ಎಸ್. ಎ.) ಜ್ಯಾರಿಗೊಳಿಸಿ ಸಂಸತ್ ಸದಸ್ಯರೂ ಕೂಡಿದಂತೆ ಅನೇಕ ಗಣ್ಯ ಕಾರ್ಮಿಕ ಧುರೀಣರನ್ನು ವಿಚಾರಣೆ ಇಲ್ಲದೆ ಬಂಧಿಸಿದುದನ್ನೂ, ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಮಿತಿಯು ಪರಿಶೀಲಿಸಿದೆ.

ಭಾರತವು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸ್ಥಾಪಕ ಸದಸ್ಯ ರಾಷ್ಟ್ರಗಳಲ್ಲಿ ಒಂದಾಗಿದ್ದರೂ, ಕಾಂಗ್ರೆಸ್ ಸರಕಾರ. ಈ ಸಂಸ್ಥೆಯ ಅನೇಕ ಠರಾವುಗಳನ್ನು ಅಂಗೀಕರಿಸಲಿಲ್ಲ. ಉದಾ : ಸಂಘಟನಾ ಸ್ವಾತಂತ್ರ್ಯ ಮತ್ತು ಸಂಘಟನೆಯ ಹಕ್ಕಿನ ರಕ್ಷಣೆ (ಠರಾವು: 87); ಸಂಘಟನೆಯ ಮತ್ತು ಸಾಮೂಹಿಕ ಚೌಕಾಸಿಯ ಹಕ್ಕು (ಠರಾವು : 98); ಕೈಗಾರಿಕೆಗಳಲ್ಲಿ ಕಾರ್ಮಿಕರ ಪ್ರಾತಿನಿಧ್ಯ (ಠರಾವು : 135) ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ಸಂಘಟನೆಯ ಹಾಗೂ ಸೇವಾ ನಿಯಮಗಳನ್ನು ನಿರ್ಧರಿಸುವ ವಿಧಾನಗಳ ಕುರಿತಾದ ಹಕ್ಕು (ಠರಾವು : 15) ಇತ್ಯಾದಿಗಳನ್ನು ಕಾಂಗ್ರೆಸ್ ಸರಕಾರ ಇನ್ನೂ ಅಂಗೀಕರಿಸಲೇ ಇಲ್ಲ! ಅಂಗೀಕರಿಸಿದ ಠರಾವುಗಳನ್ನು ತೃಪ್ತಿಕರವಾಗಿ ಅನುಷ್ಠಾನಕ್ಕೆ ತರುವುದಿಲ್ಲ!

ಪಂಜಾಬ್ ಸಮಸ್ಯೆ :

ಪರಿಹರಿಸಲು ಸಿ.ಪಿ.ಐ.(ಎಂ)ನ ಪ್ರಯತ್ನ ಮುಂದುವರೆಯುವುದು

ಪಂಜಾಬ್ ಸಮಸ್ಯೆಗೆ ಪರಿಹಾರ ಹುಡುಕಲು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ಆರಂಭ ಪ್ರಯತ್ನ ಮಾಡುವುದೆಂದು ಸಿ.ಪಿ.ಐ. (ಎಂ)ನ ಪೊಲಿಟ್‌ಬ್ಯೂರೋ ಸದಸ್ಯ ಕಾಂ| ಹರಕಿಶನ್ ಸಿಂಗ್ ಸುರ್ಜಿತ್ ತಿಳಿಸಿದ್ದಾರೆ.

ಅಕಾಲಿದಳ ಮತ್ತು ಕೇಂದ್ರ ಸರ್ಕಾರದ ನಡುವೆ ಉಂಟಾಗಿರುವ ಘರ್ಷಣೆಗೆ ಪರಿಹಾರ ಹುಡುಕಲು ಎಲ್ಲಾ ಅಖಿಲ ಭಾರತ ಮಟ್ಟದ ರಾಜಕೀಯ ಪಕ್ಷಗಳ ಪ್ರಯತ್ನಗಳನ್ನು ಒಂದುಗೂಡಿಸುವ ಯತ್ನದಲ್ಲಿ ತಮ್ಮ ಪಕ್ಷ ಮೊದಲ ಪ್ರಯತ್ನ ಕೈಗೊಳ್ಳುವುದೆಂದು ಕಾಂ|| ಸುರ್ಜಿತ್ ಹೇಳಿದರು.

ಪಂಜಾಬ್‌ನಲ್ಲಿ ಅಕಾಲಿದಳಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ನಡುವೆ ಉಂಟಾದ ಭಿನ್ನಾಭಿಪ್ರಾಯಗಳ ಕುರಿತು ಕೇಂದ್ರ ಸರ್ಕಾರವು ಕೆನಡಾದಲ್ಲಿ ಪ್ರವಾಸ ಮಾಡುತ್ತಿದ್ದ ಕಾಂ|| ಸುರ್ಜಿತ್ ಸಿಂಗ್ ಅವರಿಗೆ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಗೊಳಿಸಿ ಕೂಡಲೇ ಬರಬೇಕೆಂದು ಕೋರಿಕೆ ಸಲ್ಲಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದಾಗಿದೆ.

ಶಿರಾ ಟೌನಿನಲ್ಲಿ ಬೀಡಿ ಕಾರ್ಮಿಕರ ಹೋರಾಟ

ತಾ|| 16-12-82 ರಂದು ತುಮಕೂರು ಜಿಲ್ಲೆಯ ಶಿರಾ ತಾಲ್ಲೋಕ್ ಕೇಂದ್ರವಾದ ಶಿರಾ ಟೌನಿನಲ್ಲಿ ಅಧಿಕ ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರು ಮೆರವಣಿಗೆಯಲ್ಲಿ ಹೊರಟು ಊರಿನ ಮುಖ್ಯ ಬೀದಿಗಳಿಂದ ಸಾಗುತ್ತಾ ತಹಶೀಲ್ದಾರ್ ಕಛೇರಿಗೆ ಹೋಗಿ ತಹಶೀಲ್ದಾರ್‌ರವರ ಮುಖಾಂತರ ರಾಜ್ಯ ಸರ್ಕಾರಕ್ಕೆ ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ ಮನವಿ ಪತ್ರವನ್ನು ಸಲ್ಲಿಸಿದರು. ತಾಲ್ಲೂಕು ಕಛೇರಿ ಎದುರು ಸೇರಿದ್ದ ಬಹಿರಂಗ ಸಭೆಯಲ್ಲಿ ಕಾಂ|| ಮಹಮದ್ ದಸ್ತಗೀರ್‌ರವರು ಬೀಡಿ ಕಾರ್ಮಿಕರ ಬೇಡಿಕೆಗಳನ್ನು ವಿವರಿಸುತ್ತ ಕಳೆದ ವರ್ಷ ಸಾವಿರ ಬೀಡಿಗೆ ಕೂಲಿ 8-10 ಪೈಸೆ ನಿಗದಿಯಾಗಿದ್ದು ಮತ್ತು ಬೀಡಿ ಕಾರ್ಮಿಕರಿಗೆ ತುಟ್ಟಿ ಭತ್ತೆ ಕಾಯಿದೆಯು ಅನ್ವಯವಾಗಬೇಕೆಂದೂ, ಈ ಹೆಚ್ಚಳವಾದ ಕೂಲಿಯನ್ನು 1981 ಏಪ್ರಿಲ್ ಒಂದನೇ ತಾರೀಖಿನಿಂದ ಜಾರಿಗೆ ಬರಬೇಕೆಂದು ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟಣೆಯಾಗಿದ್ದರೂ ಸಹ ಕರ್ನಾಟಕ ರಾಜ್ಯವನ್ನು ಆಳುತ್ತಿರುವ ಗುಂಡೂರಾಯರ ಕಾಂಗ್ರೆಸ್(ಐ)ಸರ್ಕಾರದ ಮಂತ್ರಿಗಳು ಬೀಡಿ ಕಾರ್ಖಾನೆಯ ಮಾಲೀಕರಿಂದ ಲಕ್ಷಾಂತರ ರೂ.ಗಳನ್ನು ಪಡೆದು ಮೇಲ್ಕಂಡ ಗೆಜೆಟ್ ಪ್ರಕಟಣೆಯನ್ನು ಧಿಕ್ಕರಿಸಿ, ತುಟ್ಟಿ-ಭತ್ತೆ ಕಾಯಿದೆಯನ್ನು ಕೈಬಿಟ್ಟು 8-10 ಪೈಸೆ ಕೂಲಿಯ ಬದಲು ಸಾವಿರ ಬೀಡಿಗೆ 7-40 ಪೈಸೆಯನ್ನು 1982 ಜನವರಿಯಿಂದ ಜಾರಿಪಡಿಸಿ ಕಾರ್ಮಿಕರಿಗೆ ವಂಚಿಸಿದಾಗ ಕಾರ್ಮಿಕ ಮುಂಡರಿಂದ ಬಂದ ಪ್ರತಿಭಟನೆಯನ್ನು ತಪ್ಪಿಸಿಕೊಳ್ಳಲು 1983ನೇ ಜನವರಿಯಲ್ಲಿ ಪುನಃ ಬೀಡಿ ಕಾರ್ಮಿಕರಿಗೆ ಕೂಲಿಯನ್ನು ಹೆಚ್ಚಿಸಲು ಒಪ್ಪಂದವಾಗಿದ್ದು ಕರ್ನಾಟಕ ಬೀಡಿ ವರ್ಕರ್ಸ್ ಫೆಡರೇಷನ್ ಕರೆಯಂತೆ ರಾಜ್ಯಾದ್ಯಂತ ಬೀಡಿ ಮಾಲೀಕರಿಗೆ ಕಾರ್ಮಿಕರ ಸಂಘಗಳ ಮುಖಾಂತರ ಸಾವಿರ ಬೀಡಿಗೆ 12-00 ರೂ. ಕೂಲಿ ನಿಗದಿಯಾಗಬೇಕೆಂದೂ ಬೋನಸ್ಸು ಶೇಕಡ 8.33ರ ಬದಲು ಶೇ.20 ಆಗಬೇಕೆಂದೂ ಬೇಡಿಗಗಳನ್ನು ಸಲ್ಲಿಸಿ ಈಗಾಗಲೇ ಸುಮಾರು 4 ತಿಂಗಳಾಗುತ್ತಾ ಬಂದಿದೆ ಎಂದು ತಿಳಿಸಿದರು.

ರಾಜ್ಯಾದ್ಯಂತ ಬೀಡಿ ಕಾರ್ಮಿಕರು ಬಲಿಷ್ಟ ಹೋರಾಟಕ್ಕೆ ಸಿದ್ಧವಾಗುವುದರ ಜೊತೆಗೆ ಕಾಂಗ್ರೆಸ್ (ಐ) ಪಕ್ಷವನ್ನು ಕಿತ್ತೊಗೆಯಬೇಕೆಂದು ಕರೇ ಕೊಟ್ಟರು.

ನಂತರ ರೈತ ಮುಖಂಡರಾದ ಕಾಂ|| ಹೆಚ್. ಸಿ ಚನ್ನಪ್ಪನವರು ರೈತ, ಕಾರ್ಮಿಕರ ಸೌಹಾರ್ಧತೆಯ ಅಗತ್ಯತೆಯನ್ನು ಒತ್ತಿ ಹೇಳಿದರು.

ಕಾಂ| ಜ್ಯೋತಿಬಸು ಆರೋಗ್ಯ ಸುಧಾರಣೆ

ಅಸ್ವಸ್ಥರಾಗಿದ್ದ ಪ. ಬಂಗಾಳದ ಮುಖ್ಯ ಮಂತ್ರಿ ಕಾಂ| ಜ್ಯೋತಿಬಸು ಚೇತರಿಸಿಕೊಂಡಿದ್ದಾರೆ.

ಮಧುರಾಪುರ ಉಪ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ತೀವ್ರವಾಗಿ ಭಾಗವಹಿಸಿದ್ದರಿಂದಾಗಿ ಕಾಂ| ಜ್ಯೋತಿಬಸುರವರು ಅಸ್ವಸ್ಥರಾಗಿದ್ದರು.

ಈಗ ಅವರ ದೇಹಸ್ಥಿತಿ ಉತ್ತಮಗೊಳ್ಳುತ್ತಿದೆಯಾದರೂ ಅವರು ಇನ್ನೂ ಕೊಂಚಕಾಲ ವಿಶ್ರಾಂತಿ ಪಡೆಯುವುದು ಅಗತ್ಯವಾಗಿದೆಯೆಂದು ಪ. ಬಂಗಾಳದ ಎಡರಂಗದ ಅಧ್ಯಕ್ಷರಾದ ಕಾಂ| ಸರೋಜ್ ಮುಖರ್ಜಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸಂತಾಪ

ಸಿ.ಪಿ.ಐ. (ಎಂ) ರಾಜ್ಯ ಸಮಿತಿಯ ಮಾಜಿ ಕಾರ್ಯದರ್ಶಿಯವರೂ, ಈಗಿನ ರಾಜ್ಯ ಸಮಿತಿ ಸದಸ್ಯರಾದ ಕಾಂ| ಎಂ.ಕೆ ಭಟ್ ಅವರ ತಂದೆಯವರಾದ ಶ್ರೀ ಕೇಶವ ಭಟ್ ಅವರು 29-12-82 ರಂದು ಮೃತಪಟ್ಟಿದ್ದು, ಅವರ ಮರಣಕ್ಕೆ ರಾಜ್ಯ ಸಮಿತಿ ತನ್ನ ದುಃಖವನ್ನು ವ್ಯಕ್ತಪಡಿಸುತ್ತದೆ

ಕಮ್ಯುನಿಸ್ಟ್ ಪಾರ್ಟಿ ಸದಸ್ಯರಾಗಿ ಕೋಲಾರ ಜಿಲ್ಲೆಯಲ್ಲಿ ರೈತ ಸಂಘ ಕಟ್ಟಿ ಅನಂತರ ರಾಜ್ಯದ ಅಡ್ವೋಕೇಟ್ ಜನರಲ್ ಆಗಿ ಕೆಲಸ ಮಾಡಿದ ಶ್ರೀ ಬೈರಾರೆಡ್ಡಿಯವರು ತಾ|| 30-12-82 ರಂದು ಬೆಂಗಳೂರಿನಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದು, ರಾಜ್ಯ ಸಮಿತಿಯು ಇವರ ಅಕಾಲಿಕ ನಿಧನಕ್ಕೆ ಸಂತಾಪವನ್ನು ವ್ಯಕ್ತ ಮಾಡುತ್ತದೆ.

ಹೊಸಪೇಟೆ :

ತರಬೇತಿ ಶಿಬಿರ

ದಿನಾಂಕ 16-12-82 ರಂದು ಹೊಸಪೇಟೆಯ ಅನಂತಶಯನ ಗುಡಿಯಲ್ಲಿ ಹೈಸ್ಕೂಲ್ ಮಟ್ಟದ ಎಸ್.ಎಫ್.ಐ. ಕಾರ್ಯಕರ್ತರ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರಕ್ಕೆ ಎಲ್ಲಾ ಹೈಸ್ಕೂಲ್‌ಗಳಿಂದ 35 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಸೇರಿದ್ದರು. ಗುರುಶಾಂತ, ಶಾಂತಕುಮಾರಿ, ಹುಸೇನ್ ಸಾಬ್ ಇವರು ಎಸ್.ಎಫ್.ಐ.ನ ಉದ್ದೇಶ, ಸಂವಿಧಾನದ ಬಗ್ಗೆ, ಎಸ್.ಎಫ್.ಐ. ಬೆಳೆದು ಬಂದ ದಾರಿ, ಇಂದಿನ ಶಿಕ್ಷಣ ಪದ್ಧತಿ ಬಗ್ಗೆ ಸ್ಥೂಲವಾಗಿ ವಿವರಿಸಿ ಹೇಳಿದರು. ಶಿಬಿರದ ಕೊನೆಯಲ್ಲಿ ಆಯಾ ಹೈಸ್ಕೂಲ್‌ಗಳಲ್ಲಿ ಎಸ್.ಎಫ್.ಐ. ಬೆಳವಣಿಗೆ ಬಗ್ಗೆ ಆಯಾ ಹೈಸ್ಕೂಲಿನ ಸಂಗಾತಿಗಳು ವಿವರಿಸಿ ಹೇಳಿದರು. ಕೊನೆಗೆ ಮುನಿಸಿಪಲ್ ಹೈಸ್ಕೂಲಿನಲ್ಲಿ ಸಂಘಟನಾ ಸಮಿತಿ ರಚಿಸಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಚಂದ್ರಪ್ಪ, ಉಪಾಧ್ಯಕ್ಷರಾಗಿ ಮುರುಳಿ, ಪ್ರಧಾನ ಕಾರ್ಯದರ್ಶಿಯಾಗಿ ಎಲ್. ಮಂಜುನಾಥ್, ಸಹ ಕಾರ್ಯದರ್ಶಿಗಳಾಗಿ ವೀರಭದ್ರಗೌಡ, ಲಕ್ಷ್ಮಣ ಆಯ್ಕೆಯಾದರು.

ಸಮಸ್ಯೆಗಳು ಬಗೆಹರಿಯಲಾರವು

(4ನೇ ಪುಟದಿಂದ)

ಕರ್ನಾಟಕದಲ್ಲಿ ಯಾರು ಆರಿಸಿ ಬರುತ್ತಾರೆ, ಯಾರು ಸೋಲುತ್ತಾರೆಂದು ಭವಿಷ್ಯ ಹೇಳುವುದು ಕಷ್ಟ. ಆದ್ದರಿಂದ ಇಲ್ಲಿ ಕೂಡ ಜಾತೀಯ ಆಧಾರದಲ್ಲಿ ಮುಖ್ಯ ಮಂತ್ರಿಯನ್ನು ಆರಿಸಿದರೆ ಅದು ಅಭದ್ರವಾಗಿಯೇ ಉಳಿಯುವುದರಲ್ಲಿ ಸಂಶಯವಿಲ್ಲ.

ಈಗಾಗಲೇ ಮಹಾರಾಷ್ಟ್ರ, ಗುಜರಾತ್, ಬಿಹಾರ ಮೊದಲಾದ ರಾಜ್ಯಗಳಲ್ಲಿ ಆರೋಪ-ಪ್ರತ್ಯಾರೋಪಗಳು, ಮುಖ್ಯ ಮಂತ್ರಿಗಳನ್ನು ಅಧಿಕಾರದಿಂದ ಉರುಳಿಸುವ ಸಂಚುಗಳು ಬಹಿರಂಗವಾಗಿಯೇ ನಡೆದಿವೆ. ಆದ್ದರಿಂದ ಇಂದಿರಾ ಗಾಂಧಿಗೆ ಚುನಾವಣೆಯೇ ಪರಿಹಾರವನ್ನು ಒದಗಿಸುವುದಿಲ್ಲೆಂಬುದು ಸ್ಪಷ್ಟ.

ಇಂಥ ಪರಿಸ್ಥಿತಿಯಲ್ಲಿ, ಸಿ ಪಿ ಐ. (ಎಂ) ಕಾರ್ಯದರ್ಶಿ ಕಾಂ. ಇ. ಎಂ. ಎಸ್ ನಂಬೂದಿರೀಪಾದ್ ಅವರು ತಮ್ಮ ಚುನಾವಣೆಯ ಭಾಷಣಗಳಲ್ಲಿ ಹೇಳಿದ ಮಾತು ಅತಿ ಮುಖ್ಯ. ಅದೇನೆಂದರೆ, ಕರ್ನಾಟಕ, ಆಂಧ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವುದು ಅತ್ಯಗತ್ಯ. ಆದ್ದರಿಂದಲೇ ಜನರ ಸಮಸ್ಯೆಗಳೆಲ್ಲ ಬಗೆಹರಿಯುವುದಿಲ್ಲ. ದಿಲ್ಲಿಯಲ್ಲಿ ಇಂದಿರಾ ಗಾಂಧಿ ಅಧಿಕಾರದಲ್ಲಿರುವ ತನಕ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಸರಕಾರಗಳು ಭದ್ರವಾಗಿ ಉಳಿಯಲಿಕ್ಕೆ ಸಾಧ್ಯವಿಲ್ಲ, ಹಾಗೆಯೇ ರಾಜ್ಯಗಳಿಗೆ ಬೇಕಾದ ಸಂಪನ್ಮೂಲಗಳು ಲಭ್ಯವಾಗಲೂ ಶಕ್ಯವಿಲ್ಲ. ಈ ಚುನಾವಣೆಯಲ್ಲಿ ಕರ್ನಾಟಕ-ಆಂಧ್ರಗಳಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲೇಬೇಕು. 1985ರ ಲೋಕಸಭೆ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲಿಕ್ಕೆ ಇದು ಅಡಿಪಾಯವಾಗಬೇಕು ಎಂದು ಕಾಂ| ಇ. ಎಂ. ಎಸ್. ಹೇಳಿದ್ದರು.

ಈ ಚುನಾವಣೆಯ ಪ್ರತಿಫಲ ಇಂದಿರಾ ಗಾಂಧಿಗೆ ದೊಡ್ಡ ತಲೆನೋವನ್ನುಂಟುಮಾಡುವುದರಲ್ಲಿ ಸಂಶಯವಿಲ್ಲ.

ಹಾಗೆಯೇ ವಿರೋಧ ಪಕ್ಷಗಳ ಮೇಲೆ ಅದರಲ್ಲೂ ಸಿ. ಪಿ. ಐ. (ಎಂ) ಮತ್ತು ಸಿ.ಪಿ ಐ. ಮತ್ತು ಇತರ ಪುರೋಗಾಮಿ ಪಕ್ಷ ಗುಂಪು, ವ್ಯಕ್ತಿಗಳ ಮೇಲೆಯೂ ಹೆಚ್ಚಿನ ಜವಾಬ್ದಾರಿಯನ್ನು ಹೊರಿಸುತ್ತದೆ.

ಕರ್ನಾಟಕ – ಆಂಧ್ರಗಳಲ್ಲಿ ಕಾಂಗ್ರೆಸ್ ಹೋಗಿ ವಿರೋಧ ಪಕ್ಷಗಳು ಅಧಿಕಾರಕ್ಕೆ ಬಂದರೂ ಕೂಡ ರೈತರ-ಕಾರ್ಮಿಕರ, ವಿದ್ಯಾರ್ಥಿ, ಯುವಜನರ ಹೋರಾಟಗಳು ಈಗಿನಕ್ಕಿಂತಲೂ ಬಲವಾಗಿ, ಶಿಸ್ತಿನಿಂದ ನಡೆಸುವುದು ಅತ್ಯಗತ್ಯ.

ಆದ್ದರಿಂದ ಚುನಾವಣೆಯ ಪರಿಣಾಮ ರಾಜಕೀಯ ಬದಲಾವಣೆಯನ್ನುಂಟುಮಾಡುವುದಷ್ಟೇ ಅಲ್ಲ, ದುಡಿಯುವ ಜನರ ಹೋರಾಟದಲ್ಲೂ ಕ್ರಾಂತಿಕಾರಕ ಬದಲಾವಣೆಯನ್ನುಂಟು ಮಾಡುತ್ತದೆ. ಚುನಾವಣೆಯನಂತರದ ಪರಿಸ್ಥಿತಿಯ ವಿಶ್ಲೇಷಣೆಮಾಡಿ ಕಾರ್ಯಪ್ರವೃತ್ತರಾಗುವುದು ಅತ್ಯಗತ್ಯ.

೧೨ನೇ ವಾರ್ಷಿಕೋತ್ಸವ

(2ನೇ ಪುಟದಿಂದ)

ಹೊರಟು, ರೇಡಿಯೋ ಮೈದಾನದಲ್ಲಿ ಎಸ್ ಎಫ್.ಐ.ನ ಧ್ವಜಾರೋಹಣವನ್ನು ಮುಖ್ಯ ಅತಿಥಿಗಳಾದ ಕಾಂ| ತಾರಾನಾಥರಾವ್ ಅವರಿಂದ ನೇರವೇರಿಸಲಾಯಿತು. ಮುಖ್ಯ ಅತಿಥಿಗಳಾದ ಕಾಂ| ತಾರಾನಾಥರಾವ್ ಎಸ್ ಎಫ್. ಐ.ನ ಧ್ಯೇಯ ಧೋರಣೆಗಳ ಬಗ್ಗೆ ಸಂಘಟನೆಯ ಉದ್ದೇಶದ ಬಗ್ಗೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ನಂತರ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಮೆರವಣಿಗೆಯನ್ನು ಕೊಂಡೊಯ್ದು, ಜಿಲ್ಲಾಧಿಕಾರಿಗಳಿಗೆ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹಾರ ಮಾಡಲು ಒತ್ತಾಯಿಸಲಾಯಿತು. ಈ ಸಮಾರಂಭಕ್ಕೆ ಕಾಂ| ವಿ. ಎಂ. ಸೊನ್ನದ, ಪ್ರಕಾಶಹಿಟ್ನಳ್ಳಿ ಮುಂತಾದವರು ಹಾಜರಿದ್ದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

○

ವಿಮಾ ನೌಕರರ ಸಮ್ಮೇಳನ :

(5ನೇ ಪುಟದಿಂದ)

ಹಿಂದೇನೇ ಈ ರೀತಿ ಎಲ್.ಐ.ಸಿ. ಗಳಿಸುವ ಬಡ್ಡಿದರವನ್ನು ಕೃತಕ ರೀತಿಯಲ್ಲಿ ಅತೀ ಕೆಳಮಟ್ಟದಲ್ಲಿ ಇಟ್ಟಿರುವುದರ ಬಗ್ಗೆ ಕೇಂದ್ರ ಸರಕಾರವನ್ನು ಕಟುವಾಗಿ ಟೀಕಿಸಿತ್ತು. ಈ ರೀತಿ ಎಲ್. ಐ ಸಿ ಯ ಹಣ ತೊಡಗಿಸುವಲ್ಲಿ ಮಿತಿ ಹೇರುವುದು ಎಲ್. ಐ. ಸಿ. ಯ ಧ್ಯೇಯೋದ್ದೇಶಗಳಿಗೆ ಮಾರಕ ಎಂದು ಅದು ಹೇಳಿತ್ತು. ಆಗ ಬ್ಯಾಂಕ್‌ದರ 9 ಶೇಕಡಾವಿದ್ದು ಪಾಲಿಸಿದಾರರಿಗೆ ನ್ಯಾಯ ದೊರಕಬೇಕಾದರೆ ಎಲ್ ಐ. ಸಿ. ತೊಡಗಿಸಿದ ಹಣಕ್ಕೆ ಕನಿಷ್ಟ 10 ಶೇಕಡಾವಾದರೂ ಪ್ರತಿಫಲ ಇರಬೇಕೆಂದು ಅದು ಸಲಹೆ ನೀಡಿತ್ತು.

ಆದರೆ ಕೇಂದ್ರ ಸರಕಾರ ಈ ಸಲಹೆಯನ್ನು ಕಡೆಗಣಿಸಿದ್ದು ಮಾತ್ರವಲ್ಲ ಜೀವ ವಿಮೆಯನ್ನು ಇನ್ನಷ್ಟು ಅನಾಕರ್ಷಕಗೊಳಿಸಲು ಇತರ ಪಟ್ಟಭದ್ರ ಹಿತಗಳೊಂದಿಗೆ ಸೇರಿ ಸಂಚು ಹೂಡುತ್ತಿರುವಂತೆ ಕಾಣುತ್ತಿದೆಯೆಂದು ಮುಂದುವರಿದು ಪತ್ರಿಕಾ ಹೇಳಿಕೆ ಗಮನಿಸಿದೆ. ಇತ್ತೀಚೆಗೆ ಸಾರ್ವಜನಿಕ ಭವಿಷ್ಯ ನಿಧಿ, ಅಂಚೆ ಜೀವ ವಿಮೆ ಇತ್ಯಾದಿಗಳ ಮೇಲೆ ಇದ್ದ ಕಾನೂನು ರೀತ್ಯಾ ಮಿತಿಗಳನ್ನು ಸಡಿಲಿಸಿ ಅವನ್ನು ಹೆಚ್ಚು ಆಕರ್ಷಕಗೊಳಿಸಲಾಗಿದೆ. ಆದರೆ ಎಲ್.ಐ.ಸಿ.ಯ ಮಟ್ಟಿಗೇ ಮಾತ್ರ ಮಲತಾಯಿ ಧೋರಣೆ ತಳೆದು ಪಾಲಿಸಿದಾರರನ್ನು ಸತತವಾಗಿ ವಂಚಿಸಲಾಗುತ್ತಿದೆ. ಪ್ರಜ್ಞಾಶೀಲ ಪಾಲಿಸಿದಾರರು ತಕರಾರು ಮಾಡಿದಾಗ ನೌಕರರ ಮೇಲೆ ಬೊಟ್ಟು ಮಾಡಿ ತೋರಿಸಲಾಗುತ್ತಿದೆ. ಆದರೆ ಈ ಮೇಲೆ ಹೇಳಿದಂತೆ ಇದು ಕೇವಲ ಗೂಬೆಕೂರಿಸುವ ಯತ್ನ. ಪಾಲಿಸಿದಾರರ ವಂಚನೆಗೂ ನೌಕರರ ವೇತನಕ್ಕೂ ಏನೇನೂ ಸಂಬಂಧವಿಲ್ಲ. ಕೇಂದ್ರ ಸರಕಾರ ಒಂದೆಡೆ ತನ್ನ ಮಲತಾಯೀ ಧೋರಣೆಯಿಂದಾಗಿ ಪಾಲಿಸಿದಾರರನ್ನು ವಂಚಿಸುತ್ತಿದ್ದರೆ ಇನ್ನೊಂದೆಡೆ ನೌಕರರ ಬೋನಸ್, ತುಟ್ಟಿ ಭತ್ಯದ ಮೇಲೆ ಮಿತಿಹೇರಿ ಸಾಮೂಹಿಕ ಚೌಕಾಶಿಯ ಹಕ್ಕನ್ನು ಕಿತ್ತುಕೊಂಡು ಅವರನ್ನೂ ವಂಚಿಸುತ್ತಿದೆ.

ಸರಕಾರದ ಹಾಗೂ ಪಟ್ಟಭದ್ರಹಿತಗಳ ಈ ಪಾಲಿಸಿದಾರ-ವಿರೋಧೀ, ನೌಕರ ವಿರೋಧೀ ಹಾಗೂ ಎಲ್.ಐ. ಸಿ. ವಿರೋಧೀ ಅಪಪ್ರಚಾರವನ್ನು ಬಲವಾಗಿ ಖಂಡಿಸಿರುವ ಅಖಿಲ ಭಾರತ ವಿಮಾ ನೌಕರರ ಸಂಘದ ಹನ್ನೊಂದನೇ ಮಹಾ ಸಮ್ಮೇಳನ ಎಲ್.ಐ ಸಿ.ಯ ಹಣ ತೊಡಗಿಸುವಿಕೆಯ ನೀತಿಯನ್ನು ಉದಾರಗೊಳಿಸಿ ಪಾಲಿಸಿದಾರರ ಹಣಕ್ಕೆ ಯೋಗ್ಯ ಪ್ರತಿಫಲ ದೊರಕಿಸಿಕೊಡುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಲು ಎಲ್ ಐ. ಸಿ. ಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದೆ.

●

ಸೋವಿಯತ್ ಒಕ್ಕೂಟದಲ್ಲಿ ಬೆಲೆಗಳು ಹಾಗೂ ನಿಜ ವರಮಾನ

—ಲಿಯೋನಿದ್ ಕೊರಿಚೆವ್

ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಗ್ರಾಹಕರ ಬೆಲೆಗಳು ಏರುತ್ತಿವೆ. ಸೋವಿಯತ್ ಒಕ್ಕೂಟವೂ ಇದಕ್ಕೆ ಹೊರತಾಗಿಲ್ಲ. 1981ರ ಸೂಚ್ಯಂಕದ ಮೇರೆಗೆ ಸೋವಿಯತ್ ಗ್ರಾಹಕರ ಬೆಲೆಗಳು 1940ರಲ್ಲಿ ಎರಡು ಪಾಯಿಂಟ್‌ಗಳಷ್ಟು ಹೆಚ್ಚಿದುವು ಎಂಬುದು ಸ್ಪಷ್ಟವಾಯಿತು. ಅಂದರೆ ಬಹಳ ದೀರ್ಘಕಾಲದವರೆಗೂ ಸೋವಿಯತ್ ಗ್ರಾಹಕರ ಬೆಲೆಗಳಲ್ಲಿ ಭಾರೀ ಏರುಪೇರು ಆಗಲಿಲ್ಲ ಎಂಬುದು ಈ ಸೂಚ್ಯಂಕದಿಂದ ತಿಳಿದು ಬರುತ್ತದೆ.

ಜನರ ಜೀವನ ಮಟ್ಟದ ಯಥಾರ್ಥ ಸ್ಥಿತಿಯನ್ನು ಅವಲೋಕಿಸಲು ಬೆಲೆಗಳ ಸ್ವರೂಪವನ್ನು ಅವರ ವರಮಾನದೊಂದಿಗೆ ಹೋಲಿಸಬೇಕೆಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಸೋವಿಯತ್ ಒಕ್ಕೂಟದಲ್ಲಿ ಎಲ್ಲ ಬೆಲೆಗಳನ್ನೂ ಸರಕಾರವೇ ನಿಗದಿ ಮಾಡುತ್ತದೆ. ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯಲ್ಲಿ ಬೇಡಿಕೆ ಮತ್ತು ಸರಬರಾಜು ಬೆಲೆಗಳನ್ನು ನಿಗದಿ ಮಾಡುವ ಮಾನದಂಡವಾಗಿದೆ. ವರಮಾನ ಸಾಮಾನ್ಯವಾಗಿ ಸಾಮಾನ್ಯ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

1940ರ ವರ್ಷವನ್ನು ಮೂಲವರ್ಷವಾಗಿ ಪರಿಗಣಿಸಿ-ಸೋವಿಯತ್ ಒಕ್ಕೂಟದಲ್ಲಿ ಬೆಲೆಗಳ ಪರಿಸ್ಥಿತಿಯನ್ನು ವಿವೇಚಿಸಬಹುದು. ದ್ವಿತೀಯ ಮಹಾಯುದ್ಧ ಕಾಲದಿಂದ 1947ರ ತನಕ ರೇಶನ್ ವ್ಯವಸ್ಥೆ ಜಾರಿಯಲ್ಲಿತ್ತು. ರೇಶನ್ ವ್ಯವಸ್ಥೆಯಲ್ಲಿ ಜನರು ಆಹಾರ ವಸ್ತುಗಳನ್ನು ಖರೀದಿಸುವ ಸಾಮರ್ಥ್ಯ ತೀರಾ ಸೀಮಿತವಾಗಿತ್ತು. ಆದರೆ ದ್ವಿತೀಯ ವಿಶ್ವಸಮರದ ಕಾಲದಲ್ಲಿ ರಾಷ್ಟ್ರೀಯ ಸಂಪನ್ಮೂಲಗಳಿಗೆ ಅಗಾಧ ಪ್ರಮಾಣದ ಹಾನಿಯುಂಟಾದ ಕಾರಣ ಸೋವಿಯತ್ ಒಕ್ಕೂಟದಲ್ಲಿ ರೇಶನ್ ವ್ಯವಸ್ಥೆ ಅನಿವಾರ್ಯವಾಗಿತ್ತು.

1947ರಲ್ಲಿ ರೇಶನ್ ವ್ಯವಸ್ಥೆಯನ್ನು ತೆಗೆದು ಹಾಕಲಾಯಿತು. ಆಗ ಗ್ರಾಹಕರ ಬೆಲೆಗಳು ಯುದ್ಧಕ್ಕಿಂತಲೂ ಮುನ್ನ ಇದ್ದ ಮಟ್ಟಕ್ಕಿಂತ ಮೂರು ಪಟ್ಟು ಅಧಿಕವಾಗಿದ್ದುವು. ಆಹಾರ ವಸ್ತುಗಳ ಬೆಲೆಗಳು ಯುದ್ಧ ಪೂರ್ವ ಮಟ್ಟದಲ್ಲಿದ್ದುದಕ್ಕಿಂತಲೂ 3.6 ಪಟ್ಟು ಹೆಚ್ಚಿದುವು. ವರಮಾನ ಹೆಚ್ಚಿದರೂ ಈ ಬೆಲೆಗಳ ಹೆಚ್ಚಳವನ್ನು ತಾಳಿಕೊಳ್ಳಲು ಸಾಧ್ಯವಾಗಲಿಲ್ಲ.

ಆದರೆ 1947ರ ತರುವಾಯದ ವರ್ಷಗಳಲ್ಲಿ ಬೆಲೆಗಳು ಗಮನಾರ್ಹವಾಗಿ ಇಳಿದುವು. 1955ರಲ್ಲಿ ಬೆಲೆಗಳು ಸ್ಥಿರವಾದುವು. ಜನರ ಆದಾಯ ಹೆಚ್ಚಲು ತೊಡಗಿತ್ತು. 1955ಕ್ಕೆ ಹೋಲಿಸಿದರೆ 1979ರಲ್ಲಿ ಗ್ರಾಹಕರ ಬೆಲೆಗಳು 4 ಅಂಶಗಳಷ್ಟು ಹೆಚ್ಚಿದುವು. ಆಹಾರೇತರ ವಸ್ತುಗಳ ಬೆಲೆಗಳು 9 ಅಂಶಗಳಷ್ಟು ಕಮ್ಮಿಯಾದುವು. ಇದೇ ಅವಧಿಯಲ್ಲಿ ಜನರ ವರಮಾನ (ಇದರೊಂದಿಗೆ ಸರಕಾರ ಜನರಿಗೆ ವಸತಿ ಅನುಕೂಲ ಒದಗಿಸಲು ಗೃಹ ನಿರ್ಮಾಣಕ್ಕೆ ಸಾಮಾಜಿಕ ಕಾರ್ಯಕ್ರಮಗಳ ಅಂಗವಾಗಿ ಧನ ಸಹಾಯ ಮಾಡುತ್ತದೆ.) 2.3 ರಷ್ಟು ಹೆಚ್ಚಿತು. ಇದೇ ಮಟ್ಟ 1980ರ ದಶಕದಲ್ಲಿಯೂ ಉಳಿಯಲಿದೆ. ಸಿ ಪಿ.ಎಸ್.ಯು.ವಿನ 26ನೇ ಮಹಾ ಸಭೆ ಪ್ರಸ್ತುತ ದಶಕಕ್ಕೆ ಅಂಗೀಕರಿಸಿದ ಸೋವಿಯತ್ ಆರ್ಥಿಕ ಯೋಜನೆಗಳಲ್ಲಿ ಈ ವಿಚಾರವನ್ನು ಒತ್ತಿ ಹೇಳಲಾಗಿದೆ.

1981ರಲ್ಲಿ ಗ್ರಾಹಕರ ಬೆಲೆಗಳ ಸಾಮಾನ್ಯ ಸೂಚ್ಯಂಕ 14.5 ಅಂಶಗಳ ಮಟ್ಟದಲ್ಲಿ ನಿಂತಿದೆ. ಜನರ ನಿಜವರಮಾನ ಶೇಕಡಾ 600 ರಷ್ಟು ಹೆಚ್ಚಿತು. 1947ರಲ್ಲಿ ರೇಶನ್ ವ್ಯವಸ್ಥೆಯನ್ನು ರದ್ದುಗೊಳಿಸಿದ ಬಳಿಕ ಸತತ 35 ವರ್ಷಗಳುದ್ದಕ್ಕೂ ಸೋವಿಯತ್ ನಿಜ ವರಮಾನ ಹೆಚ್ಚುತ್ತಲೇ ಇದೆ. 11ನೇ ಪಂಚವಾರ್ಷಿಕ ಯೋಜನೆಯ (1981 – 85) ಪ್ರಥಮ ಎರಡು ವರ್ಷಗಳ ಅವಧಿಯಲ್ಲಿ ಜನರ ನಿಜ ವರಮಾನ ಶೇಕಡಾ 1 8ರಷ್ಟು ಹೆಚ್ಚಿದುವು. 1983ರಲ್ಲಿ ಅದು ಶೇಕಡಾ ಮೂರರಷ್ಟು ಹೆಚ್ಚುವ ನಿರೀಕ್ಷೆ ಇದೆ.

●

ಏಜನ್ಸಿದಾರರ ಗಮನಕ್ಕೆ

ನಮ್ಮ ಕೆಲವು ಏಜೆನ್ಸಿದಾರರ ಹಣ 3 – 4 ತಿಂಗಳಿಂದ ಬಾಕಿ ಉಳಿದಿದೆ. ಈ ಕುರಿತು ನಾವು ಪ್ರತ್ಯೇಕವಾಗಿ ಸಂಬಂಧಪಟ್ಟವರಿಗೆ ತಿಳಿಸಿದ್ದೇವೆ.

ಜನವರಿ 14ನೇ ತಾರೀಖಿನೊಳಗಾಗಿ ಪೂರ್ತಿ ಬಾಕಿ ಹಣ ಕಳಿಸದಿದ್ದರೆ ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸಲಾಗುವುದು.

ಪತ್ರಿಕೆಗಳ ಸಂಖ್ಯೆಯನ್ನು ಹೆಚ್ಚಿಸುವಾಗ ತಲಾ ಪತ್ರಿಕೆ 3 ರೂ. ಠೇವಣಿ ಹಣ ಕಳಿಸದಿದ್ದರೆ ಕೋರಿಕೆಯನ್ನು ಮನ್ನಿಸುವದಿಲ್ಲ.

ವ್ಯವಸ್ಥಾಪಕ
ಐಕ್ಯರಂಗ

ಕರ್ನಾಟಕದ ರಾಜಕೀಯದಲ್ಲಿ ಗಮನಾರ್ಹ ಬದಲಾವಣೆ

(1ನೇ ಪುಟದಿಂದ)

ನಗರ ಪ್ರದೇಶಗಳಲ್ಲಿ ಬೆಲೆಯೇರಿಕೆಯಿಂದ ಕಾರ್ಮಿಕ ವರ್ಗ ಮತ್ತು ಸಾಮಾನ್ಯ ಜನತೆ ನರಳುತ್ತಿದ್ದ ಸಂಧರ್ಭದಲ್ಲಿ ತಾವು ಉತ್ಪಾದಿಸುವ ಪದಾರ್ಥಗಳಿಗೆ ಲಾಭದಾಯಕ ಬೆಲೆ ಸಿಗದೆ ತಾವು ಕೊಂಡುಕೊಳ್ಳುವ ಪದಾರ್ಥಗಳಿಗೆ ದುಬಾರಿ ಬೆಲೆ ಕೊಡಬೇಕಾದ ರೈತರ ಪರಿಸ್ಥಿತಿ, ಸಾಲದ ಹೊರೆ, ಅಭಿವೃದ್ಧಿ ತೆರಿಗೆ ಇತ್ಯಾದಿ ತೆರಿಗೆಗಳಿಂದ ನರಳುತ್ತಿದ್ದ ರೈತ ವರ್ಗ ನಡೆಸಿದ ಹೋರಾಟಗಳನ್ನು ಕ್ರೂರವಾಗಿ ದಮನ ಮಾಡುವ ಮೂಲಕ ಗುಂಡೂರಾವ್ ಮತ್ತು ಇಂದಿರಾ ಗಾಂಧಿ ಸರ್ಕಾರವು ತನ್ನ ನಿಜ ಸ್ವರೂಪವನ್ನು ತೋರಿದವು ಹಿಂದೆಂದೂ ಇಲ್ಲದಿದ್ದ ಪ್ರಮಾಣದಲ್ಲಿ ಲಂಚ ರುಷುವತ್ತುಗಳು ತಾಂಡವವಾಡತೊಡಗಿತು.

ಡೊನೇಷನ್ ಪದ್ಧತಿಯನ್ನು ವಿರೋಧಿಸಿ ಮೆಡಿಕಲ್ ವಿದ್ಯಾರ್ಥಿಗಳು ನಡೆಸಿದ ಹೋರಾಟಗಳನ್ನು ಹತ್ತಿಕ್ಕುವಲ್ಲಿ ಕಾಂಗ್ರೆಸ್ ಗೂಂಡಾಗಳ ಪಾತ್ರ, ಸ್ವೈರಪುಂಡರಿ ಪಥವೀಧರರನ್ನು ಖಾಯಂಗೊಳಿಸುತ್ತೇನೆಂದು ತುಲಾಭಾರ ಮಾಡಿಸಿಕೊಂಡು ಕೊನೆಗೆ ಅವರನ್ನು ವಂಚಿಸಿದಾಗ ಅವರು ನಡೆಸಿದ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ, ಗುಂಡೂರಾಯರು ತಮಗಾಗಿ ಮತ್ತು ರಾಜೀವ್ ಗಾಂಧಿಗಾಗಿ ನಡೆಸಿದ ಅದ್ದೂರಿಯ ಸಮಾರಂಭಗಳು ಇದಕ್ಕಾಗಿ ಆಡಳಿತ ಯಂತ್ರಗಳ ದುರುಪಯೋಗ ಇವು ಜನತೆಯನ್ನು ಕೆರಳಿಸಿತು.

ಜನತೆಯು ಬೇಡಿಕೆಗಳನ್ನು ಕೊಂಚವೂ ಗಣನೆಗೆ ತೆಗೆದುಕೊಳ್ಳದೆ ಅವು ಇನ್ನಷ್ಟು ಉಲ್ಬಣಗೊಳ್ಳುವಂತೆ ಮಾಡುವುದು, ಆ ಮೂಲಕ ಬೆಳೆಯುವ ಹೋರಾಟಗಳ ವಿರೋಧ ಪಕ್ಷಗಳ ನಾಯಕರನ್ನು ಆತೆ ಆಮಿಷಗಳನ್ನೊಡ್ಡಿ ತನ್ನ ಕಡೆಗೆ ಸೆಳೆದುಕೊಳ್ಳುವುದು ಈ ಮೂಲಕ ತನ್ನ ಬಹುಮತವನ್ನು ಉತ್ತೇಕ್ಷಿಸಿಕೊಳ್ಳುವುದು, ಈ ಎಲ್ಲ ಕಾರಣಗಳಿಂದ ಜನರಲ್ಲಿ ಸರ್ಕಾರದ ಕುರಿತಾದ ಅತೃಪ್ತಿ ಹೆಚ್ಚಿತು. ಜನರಲ್ಲಿ ಜಾಗೃತಿ ಬೆಳೆದು ಜನರು ಪರ್ಯಾಯಕ್ಕಾಗಿ ಹುಡುಕತೊಡಗಿದರು. ಆಡಳಿತ ಪಕ್ಷದ ನಾಯಕರುಗಳ ಈ ಕೆಟ್ಟ ಪ್ರವೃತ್ತಿಯು ವ್ಯಕ್ತಿಗಳ ವರ್ತನೆಯಾಗಿಯೂ ಸಾಮಾಜಿಕ ಕಾರ್ಯಕರ್ತರಲ್ಲಿ ಬೆಳೆಯುವ ದುರ್ನಡತೆಯಾಗಿಯೂ ಬದಲಾಯಿತು. ಆದರೆ ನಿಜವಾಗಿಯೂ ನಿರಂಕುಶಾಧಿಕಾರ ಬೆಳೆದಾಗ ಅದು ಗೂಂಡಾಗಿರಿಯನ್ನು ಅವಲಂಬಿಸುವುದು ಅನಿವಾರ್ಯವಾಗುತ್ತದೆ. ಅಂದರೆ ಜನರ ಹೋರಾಟಗಳನ್ನು ಹತ್ತಿಕ್ಕುವ ಉದ್ದೇಶದಿಂದಲೇ ನಿರಂಕುಶಾಧಿಕಾರ ಮತ್ತು ಅದರ ಲಕ್ಷಣಗಳಾದ ಗೂಂಡಾಗಿರಿ ಮತ್ತು ದಬ್ಬಾಳಿಕೆ ಪ್ರಾರಂಭವಾಗುತ್ತದೆ. ಇದು ಜನರನ್ನು ಶೋಷಿಸುವ ಗುತ್ತೇದಾರಿ ಬಂಡವಾಳಶಾಹಿಗಳ ಪರವಾಗಿ ಬೆಳೆಯುವುದು ಸ್ವಾಭಾವಿಕವಾಗುತ್ತದೆ. ಯಾವುದೇ ಪಕ್ಷ ವಿರಲಿ ಗುತ್ತೇದಾರಿ ಬಂಡವಾಳಶಾಹೀ ಮತ್ತು ಭೂಮಾಲಿಕ ಪರವಾದ ಧೋರಣೆಗಳನ್ನು ಅನುಸರಿಸಿಸಿದರೆ ಈ ದಿಸೆಯಲ್ಲೇ ನಡೆಯಬೇಕಾಗುತ್ತದೆ.

ಈಗಿನ ಆಡಳಿತ ಪಕ್ಷದ ಆದರಲ್ಲೂ ಕಾಂಗ್ರೆಸಿನ ರಾಜಕಾರಣಿಗಳಲ್ಲಿ ಕಾಣುವ ನೈತಿಕ ಬಿಕ್ಕಟ್ಟನ್ನು ಸರಿಪಡಿಸಲು ವ್ಯಕ್ತಿಗಳು ಒಳ್ಳೆಯವರಾಗಬೇಕು ಎಂಬ ವಾದ ಇಲ್ಲಿ ಅಪ್ರಸುತ್ತ. ಏಕೆಂದರೆ ನೈತಿಕ ಬಲವುಳ್ಳ ವ್ಯಕ್ತಿಗಳೇ ಆಡಳಿತದಲ್ಲಿ ಬಂದರೂ ಭೂಮಾಲಿಕ–ಬಂಡವಾಳಶಾಹಿ ಪರವಾದ ಧೋರಣೆ ಅನುಸರಿಸಿದರೆ ಸರ್ವಾಧಿಕಾರದ ಮತ್ತು ಗೂಂಡಾಗಿರಿಯ ದಿಸೆಯಲ್ಲೇ ಹೋಗಬೇಕಾಗುತ್ತದೆ.

ನಮ್ಮ ರಾಜ್ಯದ ಕೆಲವು ಭಾಗದಲ್ಲಿ ಕಾಂಗ್ರೆಸ್‌ಗೆ ಬದಲಿಯಾಗಿ ಬಿ.ಜೆ.ಪಿ.ಯನ್ನು ಗುರುತಿಸುವುದು ಇಂದಿನ ರಾಜಕೀಯದಲ್ಲಿ ನೈತಿಕ ಬಿಕ್ಕಟ್ಟು ಉಂಟಾಗಿದೆ ಎಂಬ ವಾದದ ಪರಿಣಾಮವಾಗಿದೆ.

ನೈತಿಕ ಬಲವಿರುವವರೆಂದು ಹೇಳುವ ಬಿ.ಜೆ.ಪಿ.ಯ ವರ್ಗ ಧೋರಣೆ ಬಹಿರಂಗಗೊಂಡಿರುವ ಬೆಂಗಳೂರಿನಂತಹ ನಗರಗಳಲ್ಲಿ ಅವರನ್ನು ಜನತೆ ಪರ್ಯಾಯವೆಂದು ಗುರುತಿಸಿಲ್ಲ. ನೈಕೋ ಹೋರಾಟ ನಡೆದಾಗ ಎ.ಕೆ.ಸುಬ್ಬಯ್ಯನವರ ವಿದೇಶೀ ಬಂಡವಾಳಗಾರರ ಪರವಾದಂತಹ ಧೋರಣೆ ಅವರ ವರ್ಗ ಗುಣವನ್ನು ತೋರಿಸುವಂತಹುದಾಗಿತ್ತು. ಹಾಗೆಯೇ ಬೆಲೆಯೇರಿಕೆಗೆ ಕಾರಣರಾಗಿರುವ ವರ್ತಕರು ಈ ಗುಂಪಿಗೆ ಸೇರಿದವರಾಗಿದ್ದಾರೆ.

ಮುಂದೆ ಅಧಿಕಾರ ವಹಿಸಿಕೊಳ್ಳುತ್ತಿರುವ ಸರ್ಕಾರವು ಜನಪರ ಹೋರಾಟಗಳನ್ನು ಹತ್ತಿಕ್ಕುವ ಧೋರಣೆಯನ್ನು ಅನುಸರಿಸಬಹುದು. ಆದರೆ ಅದನ್ನು ಸಿ.ಪಿ.ಐ. (ಎಂ), ಸಿ.ಪಿ.ಐ. ಶಾಸಕರು ಜನತಾರಂಗದಿಂದ ಚುನಾಯಿತರಾಗಿರುವ ಇತರ ಪ್ರಜಾಪ್ರಭುತ್ವವಾದಿಗಳ ಬೆಂಬಲದೊಡನೆ ವಿಧಾನ ಸಭೆಯ ಒಳಗೆ ಮತ್ತು ಹೊರಗೆ ಪ್ರತಿಭಟಿಸುತ್ತಾರೆ. ಈ ಮೂಲಕ ಕರ್ನಾಟಕದ ಜನತಾ ಹೋರಾಟದ ರಾಜಕೀಯವನ್ನು ಬೆಳೆಸಲು ಸಾಧ್ಯವಾಗುತ್ತದೆ.

ಅಭಿನಂದನೆಗಳು

ಜನತಾ, ಕ್ರಾಂತಿರಂಗ, ಸಿ.ಪಿ.ಐ. ಮತ್ತು ಸಿ.ಪಿ.ಐ. (ಎಂ) ಪಕ್ಷಗಳ ಅಭ್ಯರ್ಥಿಗಳಿಗೆ ಮತ ನೀಡಿ, ಕರ್ನಾಟಕ ವಿಧಾನಸಭೆಗೆ ಆಯ್ಕೆ ಮಾಡಿರುವ ಮತದಾರರಿಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ. ಎಫ್. ಐ.) ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ| ಎಸ್. ಶಿವರಾಂ ಅಭಿನಂದನೆ ಸಲ್ಲಿಸಿದ್ದಾರೆ.

ಸುಮಾರು ನಾಲ್ಕು ವಾರಗಳು ಹಗಲಿರುಳೂ ಅವಿಶ್ರಾಂತವಾಗಿ ನಾಲ್ಕು ಪಕ್ಷಗಳ ಅಭ್ಯರ್ಥಿಗಳ ಗೆಲುವಿಗಾಗಿ ದುಡಿದ ಡಿ. ವೈ. ಎಫ್. ಐ. ನ ಸಕ್ರಿಯ ಕಾರ್ಯಕರ್ತರಿಗೂ, ಸದಸ್ಯ ವರ್ಗಕ್ಕೂ, ಜನತಾರಂಗ, ಸಿ. ಪಿ. ಐ., ಸಿ.ಪಿ.ಐ. (ಎಂ)ನ ಸದಸ್ಯ ವರ್ಗಕ್ಕೂ, ಮತ್ತು ರೈತ-ಕಾರ್ಮಿಕ ಪ್ರಜಾಸತ್ತಾತ್ಮಕ ಶಕ್ತಿಗಳಿಗೂ ಜಿಲ್ಲಾ ಸಮಿತಿಯು ವಂದಿಸಿದೆ.

●

ವರ್ತೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಸಿ.ಪಿ.ಐ. (ಎಂ) ಅಭ್ಯರ್ಥಿ ಕಾಂ. ಎಸ್. ಸೂರ್ಯನಾರಾಯಣರಾವ್ ಅವರು ಜಯಗಳಿಸಲು ಕಾರಣರಾದ ಎಲ್ಲಾ ಮತದಾರರಿಗೂ ಸಿ.ಪಿ.ಐ. (ಎಂ)ನ ಜಿಲ್ಲಾ ಸಮಿತಿ ತನ್ನ ಕೃತಜ್ಞತೆಯನ್ನು ಸಲ್ಲಿಸಿದೆ.


ಕಾಂಗ್ರೆಸ್ ಅನ್ನು ಸೋಲಿಸಲು ಅವಿಶ್ರಾಂತವಾಗಿ ಶ್ರಮಿಸಿದ ಕಾರ್ಮಿಕರು, ರೈತರು ಮತ್ತು ಜನತಾ, ಕ್ರಾಂತಿರಂಗ, ಸಿ.ಪಿ.ಐ. ಕಾರ್ಯಕರ್ತರುಗಳಿಗೆ ಸಮಿತಿ ತನ್ನ ಅಭಿನಂದನೆಗಳನ್ನು ಸಲ್ಲಿಸಿದೆ.

●

ಕರ್ನಾಟಕದಲ್ಲಿ ವಿರೋಧ ಪಕ್ಷಗಳ ಅಭ್ಯರ್ಥಿಗಳನ್ನು ಚುನಾಯಿಸಿದ ಮತದಾರರಿಗೂ ಸರ್ವಾಧಿಕಾರೀ ಕಾಂಗ್ರೆಸ್ ಪಕ್ಷದ ಸೋಲಿಗಾಗಿ ಶ್ರಮಿಸಿದ ಎಲ್ಲಾ ಕಾರ್ಯಕರ್ತರಿಗೂ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ.


ಕೆ. ಜಿ. ಎಫ್. ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ| ಟಿ. ಎಸ್. ಮಣಿಯವರು ಸುಮಾರು ಸಾವಿರ ಮತಗಳ ಅಲ್ಪ ಅಂತರದಿಂದ ಅಪಜಯ ಹೊಂದಿದ್ದಾರೆ.

ಚುನಾವಣೆಯಲ್ಲಿ ಜಯಗಳಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳ




ಕಾಂ| ಪಿ. ರಾಮಚಂದ್ರರಾವ್

ಕರ್ನಾಟಕ ವಿಧಾನ ಸಭಾ ಚುನಾವಣೆಯಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷಕ್ಕೆ ದೊರೆತ ಪ್ರಥಮ ಗೆಲುವು ಕಾಂ| ಪಿ. ರಾಮಚಂದ್ರರಾವ್ ಅವರದು. ದಕ್ಷಿಣ ಕನ್ನಡದ ಉಳ್ಳಾಲ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ| ಪಿ. ರಾಮಚಂದ್ರರಾವ್ ಅವರು ತಮ್ಮ ಸಮೀಪದ ಎದುರಾಳಿ ಕಾಂಗ್ರೆಸ್ (ಐ)ನ ಮಹಮದ್ ಮಸೂದ್ ಅವರಿಗಿಂತ 2,520 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಇವರು ಗಳಿಸಿದ ಒಟ್ಟು ಮತಗಳು 16, 423.



ಕಾಂ| ಅಪ್ಪಸ್ವಾಮಿರೆಡ್ಡಿ

ಕೋಲಾರ ಜಿಲ್ಲೆಯ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ| ಅಪ್ಪಾಸ್ವಾಮಿರೆಡ್ಡಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ (ಐ)ನ ಮುನಿರಾಜು ಅವರಿಗಿಂತ ಸುಮಾರು 10,562 ಮತಗಳನ್ನು ಹೆಚ್ಚಿಗೆ ಪಡೆದು ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ಇವರು ಗಳಿಸಿದ ಮತಗಳು 35,699.



ಕಾಂ| ಎಸ್ ಸೂರ್ಯನಾರಾಯಣರಾವ್

ಬೆಂಗಳೂರಿನ ವರ್ತೂರು ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸಿದ್ದ ಸಿ.ಪಿ.ಐ. (ಎಂ)ನ ಅಭ್ಯರ್ಥಿ ಕಾಂ| ಎಸ್. ಸೂರ್ಯನಾರಾಯಣರಾವ್ ಅವರು ತಮ್ಮ ಕಾಂಗ್ರೆಸ್ ಎದುರಾಳಿಯನ್ನು 19,810 ಮತಗಳ ಅಂತರದಿಂದ ಸೋಲಿಸಿ ಭಾರೀ ಜಯಗಳಿಸಿದ್ದಾರೆ. ಇವರು 48,342 ಮತಗಳನ್ನು ಗಳಿಸಿದ್ದಾರೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street, Sultanpet, B-560 053. Phone-24154, Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO